ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 184 | ದಿನಾಂಕ : 03-05-2026 Date : 03-05-2026 | ರವಿವಾರ Sunday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

# ಉದ್ಯೋಗ ಖಾತ್ರಿ, ಕೆಲಸ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು, ನೆರಳು, ಆರೋಗ್ಯ ವ್ಯವಸ್ಥೆಗೆ ಜಿಲ್ಲಾ ಪಂಚಾಯ್ತಿ ಸಿಇಓ ಆದೇಶ

# ಸಮಯ ಬದಲಾವಣೆಗೆ ಸೂಚನೆ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.2**–ಹೆಚ್ಚುತ್ತಿರುವ ಬಿಸಿಲಿನ ಪ್ರಖರತೆಯ ಹಿನ್ನಲೆಯಲ್ಲಿ ಉದ್ಯೋಗ ಖಾತ್ರಿ ಕಾರ್ಮಿಕರು ಎದುರಿಸುತ್ತಿರುವ ದೈಹಿಕ ಸಮಸ್ಯೆಗಳನ್ನು ನಿವಾರಿಸಲು ಮುಂದಾಗಿರುವ ಜಿಲ್ಲಾ ಪಂಚಾಯ್ತಿ ಮಧ್ಯಾನ್ಹ 12 ಗಂಟೆಯೊಳಗೆ ಕಾಮಗಾರಿ ನಡೆಸಲು ಸೂಚನೆ ನೀಡಿದೆ.

ಬಿಸಿಲ ಬೇಗೆಯಿಂದ ತತ್ತರಿಸಿ ಹೋಗುತ್ತಿರುವ ಕೂಲಿ ಕಾರ್ಮಿಕರು ದಿನವಿಡಿ ದೈಹಿಕ ಶ್ರಮವಹಿಸುತ್ತಿರುವದರಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದು ಜಿಲ್ಲೆಯಲ್ಲಿ ಇಬ್ಬರು ಪ್ರಾಣ ಕಳೆದುಕೊಂಡಿರುವ ಘಟನೆಗಳ ಹಿನ್ನಲೆಯಲ್ಲಿ ಆರೋಗ್ಯ ರಕ್ಷಣೆ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ




ಈಶ್ವರಕುಮಾರ ಕಾಂದೂ ಗ್ರಾಮ ಪಂಚಾಯ್ತಿಗಳಿಗೆಸೂಚನೆ ನೀಡಿದ್ದಾರೆ.

ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ನೊಂದಾಯಿತ ಕಾರ್ಮಿಕರು ಕೆಲಸ ನಿರ್ವಹಿಸುವ ಸಮಯದಲ್ಲಿ ವಿನಾಯ್ತಿ ನೀಡುವದು, ಆರೋಗ್ಯ ದೃಷ್ಟಿಯಿಂದ ಕೆಲಸದ ಸ್ಥಳದಲ್ಲಿ ಆರೋಗ್ಯ ರಕ್ಷಣೆಗೆ ಅಗತ್ಯ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸುವಂತೆ ಗ್ರಾಮ ಪಂಚಾಯ್ತಿಗಳಿಗೆ ನಿರ್ದೇಶನ ನೀಡಿದ್ದಾರೆ.

ಉದ್ಯೋಗ ಖಾತ್ರಿ ಕೆಲಸ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ವಿಶ್ರಾಂತಿಗೆ ನೆರಳು ವ್ಯವ ಸ್ಥೆ ಮಾಡುವದು,ತುರ್ತು ಆರೋಗ್ಯ ಸಮಸ್ಯೆಗಳಿಗೆ ಪ್ರಥಮ ಚಿಕಿತ್ಸಾ ವ್ಯವಸ್ಥೆ, ಆರು ವರ್ಷದೊಳಗಿನ ಮಕ್ಕಳೊಂದಿಗೆ ➘4

## ವಾಣಿಜ್ಯ ಗ್ಯಾಸ್ ದರ ಏರಿಕೆ ಖಂಡನೆ ರಜಾಕ್ ಉಸ್ತಾದ್ ಆರೋಪ

**ರಾಯಚೂರು,ಮೇ.2**–ಪಂಚ ರಾಜ್ಯಗಳ ಚುನಾವಣೆಯು ಮುಗಿದ ತಕ್ಷಣ ಕೇಂದ್ರದ ಬಿಜೆಪಿ ಸರ್ಕಾರ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಬೆಲೆಯನ್ನು ಏಕಾಏಕಿ ಹೆಚ್ಚಿಸಿರುವುದು ಜನರ ಮೇಲಿನ ಲೂಟಿಗೆ ಸಮಾನವಾಗಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ರಾಜ್ಯ ವಕ್ತಾರ ಡಾ. ರಝಾಕ ಉಸ್ತಾದ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 19 ಕೆಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಸುಮಾರು 993ರವರೆಗೆ ಹೆಚ್ಚಿಸಲಾಗಿದ್ದು, ಇದೇ ವೇಳೆ 5 ಕೆಜಿ ಸಣ್ಣ ಸಿಲಿಂಡರ್ ಬೆಲೆಯನ್ನೂ 261 ಹೆಚ್ಚಿಸಿರುವುದು ನಗರ ಪ್ರದೇಶದ ಸಣ್ಣ ಕುಟುಂಬಗಳಿಗೆ ಹಾಗೂ ವ್ಯಾಪಾರಸ್ಥರಿಗೆ ಭಾರೀ ಹೊರೆ ಆಗಿದೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರ ಒಂದು ಕಡೆ ಗ್ಯಾಸ್ ಸಿಲಿಂಡರ್‌ಗಳ ಕೊರತೆಯಿಲ್ಲ ಎಂದು ಹೇಳುತ್ತಿದ್ದರೂ, ಕಳೆದ ಎರಡು ತಿಂಗಳಿಂದ ಜನರು ಗ್ಯಾಸ್ ಸಿಗದೇ ಪರದಾಡುತ್ತಿರುವ ಪರಿಸ್ಥಿತಿ ದೇಶದ ಹಲವು ಭಾಗಗಳಲ್ಲಿ ➘4

## ರಸಗೊಬ್ಬರ ಬಳಕೆ ನಿಯಂತ್ರಿಸಿ ಸಾವಯವ ಕೃಷಿಗೆ ಆದ್ಯತೆ ಅಗತ್ಯ: ನಯೀಮ್ ಹುಸೇನ್

**ರಾಯಚೂರು, ಮೇ.2**–ಅತಿಯಾದ ರಸಗೊಬ್ಬರಗಳ ಬಳಕೆ ಮಣ್ಣಿನ ಫಲವತ್ತತೆಯನ್ನು ಹಾನಿಗೊಳಿಸುವುದಲ್ಲದೇ ಬೆಳೆಗಳ ಇಳುವರಿಗೂ ಕೆಟ್ಟ ಪರಿಣಾಮ ಬೀರುತ್ತದೆ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಉಪ ಕೃಷಿ ನಿರ್ದೇಶಕ ನಯೀಮ್ ಹುಸೇನ್ ಹೇಳಿದರು.

ತಾಲೂಕಿನ ಮಿಟ್ಟಿಮಲ್ಕಾಪೂರ ಗ್ರಾಮದಲ್ಲಿ ಕಸಬಾ ಹೋಬಳಿ ರೈತ ಸಂಪರ್ಕ ಕೇಂದ್ರದ ವತಿಯಿಂದ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಧರ್ತಿ ಮಾತಾ ಬಚಾವೋ ಅಭಿಯಾನ 2026–27 ಅಂಗವಾಗಿ ರಸಗೊಬ್ಬರಗಳ ಸಮತೋಲನ ಬಳಕೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೈವಿಕ ಗೊಬ್ಬರ, ಕೊಟ್ಟಿಗೆ ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರಗಳನ್ನು ಹೆಚ್ಚು ಪ್ರಮಾಣದಲ್ಲಿ ಬಳಸುವುದರಿಂದ ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಬಹುದಲ್ಲದೇ ➘4

## ಬೆಳಗಾವಿಯಲ್ಲಿ ಅಳಿಯನ ಮನೆಗೆ ಕನ್ನ ಹಾಕಿದ ಅತ್ತೆ ಆರೋಪಿಗಳನ್ನು ಜೈಲಿಗಟ್ಟಿದ ಪೊಲೀಸರು

**ಬೆಳಗಾವಿ,ಮೇ.2**– ಮಾಡಿದ ಸಾಲ್ ತೀರಿಸಲು ಅಳಿಯನ ಮನೆಗೆ ಕನ್ನ ಹಾಕಿದ ಅತ್ತೆಗೆ ಪೊಲೀಸರು ಜೈಲಿನ ದಾರಿ ತೋರಿಸಿರುವ ಘಟನೆ ಬೆಳಗಾವಿ ನಗರದಲ್ಲಿ ನಡೆದಿದೆ. ಇನ್ನಿಬ್ಬರು ಪುತ್ರಿಯರ ಮದುವೆ ಸಾಲ ತೀರಿಸಲು ಹಿರಿಯ ಅಳಿಯನ ಮನೆಯಲ್ಲಿ ಅತ್ತೆ ಕಳ್ಳತನ ಮಾಡಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಹಿರಿಯ ಅಳಿಯ ಸಂಪಾದನೆ ಮಾಡಿ ಖರೀದಿಸಿದ್ದ ಚಿನ್ನವನ್ನು ಸಂಬಂಧಿ ಜೊತೆಗೂಡಿ ಕದ್ದ ಆರೋಪದಲ್ಲಿ ಅತ್ತೆ ಈಗ ಪೊಲೀಸರ ಅತಿಥಿ ಆಗಿದ್ದಾಳೆ. ಬೆಳಗಾವಿಯ ಪಿರಣವಾಡಿ ನಿವಾಸಿ ಉಜ್ವಲಾ ಕಮ್ಮಾರ, ಶಿವಾ ಅಪ್ಪಯನವರ ಕಳ್ಳತನ ಪ್ರಕರಣದಲ್ಲಿ ಬಂಧನವಾದ ಆರೋಪಿಗಳು.

16 ಲಕ್ಷ ಮೌಲ್ಯದ 110 ಗ್ರಾಂ ಚಿನ್ನದ ಆಭರಣಗಳನ್ನು ಸಂಬಂಧಿ ಆಗಿರುವ ಶಿವಾ ಅಪ್ಪಯನವರ ➘4

## ಕಲಬೆರಕೆ ಸೇಂದಿ ಮಾರಾಟ: ಮೂರು ಜನರ ಬಂಧನ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.2**–ಜಿಲ್ಲೆಯಲ್ಲಿ ಅಕ್ರಮವಾಗಿ ಸಿ.ಹೆಚ್. ಪೌಡರ್ ಬಳಸಿ ತಯಾರಿಸಿ ಕಲಬೆರಕೆ ಮದ್ಯ ಮಾರಾಟ ಮಾಡುತ್ತಿದ್ದವರ ಮೇಲೆ ದಾಳಿ ನಡೆ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಆರೋಪಿ ಗಳನ್ನು ಬಂಧಿಸಿ, ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.ಯಾಪಲದಿನ್ನಿ ಪೊಲೀಸ್ ಠಾಣಾ ವ್ಯಾಪ್ತಿಯ ಕೊರ್ತಕುಂದ ➘4

## ಬುರ್ದಿಪಾಡನಲ್ಲಿ ಕುರಿ ಶೆಟ್‌ಗೆ ಅಕಸ್ಮಿಕ ಬೆಂಕಿ ತಗುಲಿ 20 ಕುರಿ, 10 ಮೇಕೆಗಳ ಸಜೀವ ದಹನ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.2**–ತಾಲ್ಲೂಕಿನ ಬುರ್ದಿಪಾಡ ಗ್ರಾಮದಲ್ಲಿ ಬೇರೊಂದು ಹೊಲದಲ್ಲಿ ಹಾಕಲಾಗಿದ್ದ ಬೆಂಕಿಯ ಕಿಡಿ ತಾಗಿ ಭಾರೀ ಅಗ್ನಿ ಅವಘಡ ಸಂಭವಿಸಿ ಕುರಿ ಶೆಡ್ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದ್ದು, ಪಕ್ಕದಲ್ಲಿದ್ದ ಮನೆಗೂ ಹಾನಿಯಾಗಿದೆ.

ತಾಲೂಕಿನ ಬುರ್ದಿಪಾಡ ಗ್ರಾಮದಲ್ಲಿ ನಾಗಮ್ಮ ಅವರಿಗೆ ಸೇರಿದ ಕುರಿ ಶೆಡ್ ಹಾಗೂ ಮನೆ ಈ ಅವಘಡದಲ್ಲಿ ಹಾನಿಗೀಡಾಗಿವೆ.

ನಾಗಮ್ಮಳ ಹೊಲದ ಸ್ವಲ್ಪ ದೂರದಲ್ಲಿದ್ದ ಮತ್ತೊಂದು ಹೊಲದಲ್ಲಿ ಕಸಕ್ಕೆ ಬೆಂಕಿ ಹಚ್ಚಲಾಗಿದ್ದು, ಅದರ ಕಿಡಿಗಳು ಗಾಳಿಯಿಂದ ಹರಿದು ಬಂದು ಕುರಿ ಶೆಡ್‌ಗೆ ತಗುಲಿ ಬೆಂಕಿ ಹೊತ್ತಿಕೊಂಡಿದೆ ಎಂದು ತಿಳಿದುಬಂದಿದೆ. ➘4



## ವಾರ್ಡ 18 ರಲ್ಲಿ ರಸ್ತೆ ಕಾಮಗಾರಿಗೆ ವಸಂತಕುಮಾರ ಚಾಲನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**–ನಗರದ ವಾರ್ಡ ನಂ 18ರಲ್ಲಿ 1.20ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯರಾದ ಎ.ವಸಂತಕುಮಾರ ಇಂದು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ ನಂ. 18 ರ ವಿವಿಧ ರಸ್ತೆಗಳ ಅಭಿವೃದ್ದಿಗೆ ಕೆಕೆಆರ್‌ಡಿಬಿ ಯೋಜನೆಯಡಿಯಲ್ಲಿ ಸುಮಾರು 1.20 ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುತ್ತದೆ ಎಂದರು.

ಇಲಾಖೆಯವರು ಗುಣಮಟ್ಟದ ಕಾಮಗಾರಿ ಮಾಡಬೇಕೆಂದು ತಿಳಿಸಿದರು, ಇದರ ಜೊತೆಗೆ ವಾರ್ಡಿಗೆ ಇನ್ನು ಬೇರೆ ➘4

## ಕವಿತಾಳದಲ್ಲಿ 14 ಬೈಕ್ ಕಳ್ಳತನ ಮಾಡಿದ ಆರೋಪಿ ಬಂಧನ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.2**–ಜಿಲ್ಲೆಯ ಕವಿತಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ಕಳ್ಳತನ ಪ್ರಕರಣವನ್ನು ಪೊಲೀಸರು ಬೇಧಿಸಿದ್ದಾರೆ.

ದ್ವಿ ಚಕ್ರಗಳನ್ನು ಕಳ್ಳತನ ಮಾಡಿದ ಆರೋಪಿಯನ್ನು ಪೋಲಿಸರು ಬಂಧಿಸಿ 14 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣಾಂಗ್ಶು ಗಿರಿ ಅವರ ಮಾರ್ಗದರ್ಶನದಲ್ಲಿ, ಹೆಚ್ಚುವರಿ ಎಸ್‌ಪಿ ಎಸ್.ಜೆ. ಕುಮಾರಸ್ವಾಮಿ ಹಾಗೂ ಹರೀಶ್ ಜಿ. ಅವರ ಸಹಕಾರದೊಂದಿಗೆ, ಡಿಎಸ್‌ಪಿ ಚಂದ್ರಶೇಖರ ಅವರ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು.

ಸಿಪಿಐ ಶಶಿಕಾಂತ ಎಂ., ಪಿಎಸ್‌ಐ ಅಶ್ಮೀರ್ ಹಾಗೂ ಪ್ರದೀಪ ಕುಮಾರ್ ಸೇರಿದಂತೆ ಕವಿತಾಳ ಪೊಲೀಸ್ ಠಾಣೆಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು,

ಆರೋಪಿಯನ್ನು ಬಂಧಿಸಿ, 14 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಬೈಕ್‌ಗಳ ಒಟ್ಟು ಮೌಲ್ಯ ಸುಮಾರು 8,40,000 ಎಂದು ಅಂದಾಜಿಸಲಾಗಿದೆ. ಈ ಯಶಸ್ವಿ ಕಾರ್ಯಾಚರಣೆಗೆ ಪೊಲೀಸ್ ತಂಡವನ್ನು ಎಸ್‌ಪಿ ಶ್ಲಾಘಿಸಿದ್ದಾರೆ.

## ಅಂಗನವಾಡಿ ಕೇಂದ್ರಗಳ ರಜೆ ವಿಸ್ತರಣೆಗೆ ಆಗ್ರಹಿಸಿ ಅಂಗನವಾಡಿ ನೌಕರರಿಂದ ಪ್ರತಿಭಟನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ,2**–ಜಿಲ್ಲೆಯಲ್ಲಿ ತೀವ್ರ ಬೇಸಿಗೆ ಹಿನ್ನೆಲೆ ಅಂಗನವಾಡಿ ಕೇಂದ್ರಗಳ ರಜೆಯನ್ನು ವಿಸ್ತರಿಸಬೇಕೆಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರದ ಆದೇಶದಂತೆ ಏಪ್ರಿಲ್ 16ರಿಂದ ಮೇ 1ರವರೆಗೆ 15 ದಿನಗಳ ಕಾಲ ಅಂಗನವಾಡಿ ಕೇಂದ್ರಗಳಿಗೆ ರಜೆ ನೀಡಲಾಗಿತ್ತು. ಆದರೆ ಮೇ 2ರಿಂದ ಪುನಃ ಕೇಂದ್ರಗಳನ್ನು ಆರಂಭಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ರಜೆ ಅವಧಿಯಲ್ಲಿಯೂ ಅಂಗನವಾಡಿ ನೌಕರರು ಜನಗಣತಿ, ಚುನಾವಣೆಯಂತಹ ಇಲಾಖೆಯೇತರ ➘4

## ಹೊಸ ಆಶ್ರಯ ಕಾಲೋನಿಯಲ್ಲಿ ಚರಂಡಿ, ವಿದ್ಯುತ್ ದೀಪ ಅಳವಡಿಕೆಗೆ ಒತ್ತಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು, ಮೇ.2**–ನಗರದ ವಾರ್ಡ್ ನಂ. 28ರ ಹೊಸ ಆಶ್ರಯ ಕಾಲೋನಿಯಲ್ಲಿ ಮೂಲಭೂತ ಸೌಲಭ್ಯಗಳ ಒದಗಿಸಲು ಕ್ರಮ ವಹಿಸುವಂತೆ ಒತ್ತಾಯಿಸಿ ಎಐಎಂಐಎಂ ವತಿಯಿಂದ ಮಹಾನಗರ ಪಾಲಿಕೆ ಆಯುಕ್ತರ ಸ್ಥಾನಿಕ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಸರ್ವೆ ನಂ. 556, 557 ಮತ್ತು 558 ಪ್ರದೇಶಗಳಲ್ಲಿ ವಿದ್ಯುತ್ ಬೀದಿ ದೀಪಗಳ ಅಭಾವ, ಒಳಚರಂಡಿ ವ್ಯವಸ್ಥೆಯ ಕೊರತೆ ಹಾಗೂ ರಸ್ತೆಗಳ ಡಾಂಬರೀಕರಣವಾಗ ದಿರುವುದರಿಂದ ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಮನವಿ ಮಾಡಿದರು.

ತಕ್ಷಣವೇ ಬೀದಿ ದೀಪಗಳ ವ್ಯವಸ್ಥೆ, ಸಮರ್ಪಕ ಒಳಚರಂಡಿ ➘4



## ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ತೀವ್ರಗೊಳಿಸಲು ಕರೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು, ಮೇ.2**–ಅಂತರರಾಷ್ಟ್ರೀಯ ಕಾರ್ಮಿಕರ ದಿನದ ಅಂಗವಾಗಿ ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆ ಹಾಗೂ ಶೋಷಣೆಯ ವಿರುದ್ಧ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವ ಅಗತ್ಯವಿದೆ ಎಂದು ಎಐಸಿಸಿಟಿಯು ಜಿಲ್ಲಾ ಸಮಿತಿ ಕರೆ ನೀಡಿದೆ.

ತಾಲೂಕಿನ ಯರಗೇರದಲ್ಲಿ ಎಐಸಿಸಿಟಿಯು ಜಿಲ್ಲಾ ಸಮಿತಿ ವತಿಯಿಂದ ಮೇ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಸಂದರ್ಭದಲ್ಲಿ ದೇಶದ ಕಾರ್ಮಿಕರಿಗೆ ಹೋರಾಟದ ಶುಭಾಶಯಗಳನ್ನು ತಿಳಿಸಲಾಯಿತು.

ಎಐಸಿಸಿಟಿಯು ಜಿಲ್ಲಾಧ್ಯಕ್ಷ ಅಜೀಜ್ ಜಾಗಿರದಾರ್ ಮಾತನಾಡಿ, ಏಪ್ರಿಲ್ 1ರಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಬದಲು, ಹೆಚ್ಚುವರಿ ಶೋಷಣೆ ಮತ್ತು ಅಸುರಕ್ಷಿತ ಉದ್ಯೋಗ ಪರಿಸ್ಥಿತಿಗೆ ದಾರಿಯಿಡುತ್ತಿವೆ ಎಂದು ಆರೋಪಿಸಿದರು. ಎಂಟು ಗಂಟೆಗಳ ಕೆಲಸದ ಹಕ್ಕು ದುರ್ಬಲಗೊಳ್ಳುತ್ತಿದ್ದು, ಗುತ್ತಿಗೆ ಹಾಗೂ ಗಿಗ್ ಪದ್ಧತಿಗಳ ಮೂಲಕ ಕಾರ್ಮಿಕರ ಮೇಲೆ ಒತ್ತಡ ಹೆಚ್ಚುತ್ತಿದೆ ಎಂದು ತಿಳಿಸಿದರು. ➘4

# ಹೋರಾಟಕ್ಕೆ ಸಂದ ಜಯವೇ ಕಾರ್ಮಿಕರ ದಿನಾಚರಣೆ ಸಂಭ್ರಮಕ್ಕೆ ಕಾರಣ-ಬಸವರಾಜ್ ಶೀಲವಂತರ್

ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,ಮೇ.1-** ಹೋರಾಟಕ್ಕೆ ಸಂದ ಜಯವೇ ಕಾರ್ಮಿಕರ ದಿನಾಚರಣೆ ಸಂಭ್ರಮಕ್ಕೆ ಕಾರಣ ಎಂದು ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್ ಹೇಳಿದರು.

ಕೊಪ್ಪಳ ತಾಲೂಕಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಗರದ ಶಾರದಾ ಟಾಕೀಸ್ ಹಿಂದಿನ ರಸ್ತೆಯಲ್ಲಿರುವ ತನ್ನ ಕಾರ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆದ ವಿಶ್ವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮುಂದುವರೆದು ಮಾತನಾಡಿದ ಬಸವರಾಜ ಶೀಲವಂತರ ಕಾರ್ಮಿಕರ ಹೋರಾಟ 1880 ರಲ್ಲಿ ಒಂದ ಕಡೆ ಕೆನಡಾ ಮತ್ತೊಂದು ಕಡೆ ಚಿಕಾಗೋ ದಲ್ಲಿ ತೀವ್ರತೆ ಪಡೆದುಕೊಂಡಿತ್ತು. ಚಿಕಾಗೋ ದಲ್ಲಿ ನಡೆದ ಹೋರಾಟ ಹಿಂಸಾತ್ಮಕವಾಗಿ ಪರಿವರ್ತನೆ ಆಯಿತು. ಅದರಲ್ಲಿ ಸಾಕಷ್ಟು ಕಾರ್ಮಿಕರು ಬಲಿಯಾಗಿ ರಕ್ತದ ಕೋಡಿಯೆ ಹರಿಯಿತು.ಕಾರ್ಮಿಕರ ಹೋರಾಟ ತ್ಯಾಗ ಬಲಿದಾನದಿಂದ ಸಿಕ್ಕ ಜಯ ವಿಜಯೋತ್ಸವದ ಸಂಭ್ರಮದ ದಿನ ಎಂದು ನುಡಿದರು.

ನಗರ ಸಭೆ ಮಾಜಿ ಅಧ್ಯಕ್ಷ ಚಂದ್ರಶೇಖರ ಕವಲೂರು ಮಾತನಾಡಿ ಕಾರ್ಮಿಕ ದಿನಾಚರಣೆ ಸಂಭ್ರಮ ಸಂತೋಷ ತಂದಿದೆ.ಕಟ್ಟಡ ಕಾರ್ಮಿಕರು ಸಹಕಾರ ಸಂಘ ರಚಿಸಿಕೊಳ್ಳಿ ನಮ್ಮಲ್ಲಿ ಇರುವ ಬೈಲಾ ಹಾಗೂ ಮಾಹಿತಿ ಕೊಡುತ್ತೇನೆ ಎಂದು ಸಲಹೆ ನೀಡಿದರು.

ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಸಂಚಾಲಕ ಎಸ್.ಎ.ಗಫಾರ್ ಮಾತನಾಡಿ ವಿಶ್ವದಲ್ಲಿ ಮೊದಲು ಕಾರ್ಲ್ ಮಾರ್ಕ್ಸ್ ಮತ್ತು ಲೆನಿನ್ ಬೀದಿಗಳಲ್ಲಿ ಸಭೆಗಳನ್ನು ನಡೆಸಿ ಕಾರ್ಮಿಕರಿಗೆ ಎಂಟು ತಾಸು ಕೆಲಸ ಮಾಡಲು ಜಾಗೃತಿ ಮೂಡಿಸುತ್ತಿದ್ದರು.ಆಗ ರಾಜರ ಆಳ್ವಿಕೆಯ ಕಾಲದಲ್ಲಿ ರಾಜರು ತಮ್ಮ ರಾಜ್ಯದಿಂದ ಗಡಿ ಪಾರು ಮಾಡುತ್ತಿದ್ದರು.ಕ್ರಾಂತಿಯ ಕಿಡಿಯಿಂದ ಜಾಗೃತಗೊಂಡ ಕಾರ್ಮಿಕರು ಚಿಕಾಗೋ ದಲ್ಲಿ ನಡೆದ ಹೋರಾಟದ ವೇಳೆ ಸಂಘರ್ಷಕ್ಕೆ ತಿರುಗಿ ರಕ್ತಪಾತ ಸಂಭವಿಸಿ ಹರಿಯುತ್ತಿದ್ದ ರಕ್ತದಲ್ಲಿ ಬಟ್ಟೆ ಒದ್ದೆ ಮಾಡಿ ಕೆಂಪು ಧ್ವಜದ ಸಂಕೇತವಾಗಿ ಎತ್ತಿ ಹಿಡಿದು




ಜಯ ಸಾಧಿಸಿದರ ಪ್ರತಿಫಲವಾಗಿ ಎಂಟು ತಾಸು ಕೆಲಸ ಮಾಡುವ ಅವಕಾಶ ಪಡೆದ ದುಡಿಯುವವರು ಕಾರ್ಮಿಕ ದಿನ ಆಚರಿಸುತ್ತಿದೆ.ಕಟ್ಟಡ ಕಾರ್ಮಿಕರಿಗೆ ಕಿಟ್ ಗಳ ನೆಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಧಿಕಾರಿಗಳು ಮತ್ತು ರಾಜಕಾರಣಿಗಳು ಕೊಳ್ಳೆ ಹೊಡೆಯುತ್ತಿದ್ದಾರೆ. ಹಿಂದಿನ ಸರ್ಕಾರಕ್ಕೆ ಕಟ್ಟಡ ಕಾರ್ಮಿಕರಿಗೆ ಯಾವುದೇ ಕಿಟ್ ಗಳು ಬೇಡ ಎಂದು ಹಲವು ಬಾರಿ ಹೋರಾಟ ಮಾಡಿ ಮನವಿ ಸಲ್ಲಿಸಿದರೂ ಕಿಟ್ ವಿತರಣೆ ನಿಲ್ಲಿಸಿಲ್ಲ ಅದಕ್ಕೆ ಚುನಾವಣೆಯಲ್ಲಿ ಸರ್ಕಾರ ಬದಲಾಯಿಸಲಾಯಿತು. ಕಾರ್ಮಿಕ ಸಚಿವನಾದಾಗ ಸಂತೋಷ ಲಾಡ್ ಶ್ರೀಮಂತನಾಗಿದ್ದು ಭ್ರಷ್ಟಾಚಾರ ನಡೆಸುವುದಿಲ್ಲ ಎಂದು ನಂಬಿಕೆ ಇಟ್ಟು ಕಟ್ಟಡ ಕಾರ್ಮಿಕ ಸಂಘಟನೆ ಮುಖಂಡರು ಭೇಟಿ ಮಾಡಿ ಭ್ರಷ್ಟಾಚಾರ ನಡೀತಿದೆ ಕಿಟ್ ಗಳ ನಿಲ್ಲಬೇಕು ಎಂದು ಮನವರಿಕೆ ಮಾಡಿ ಬಂದ ಒಂದು ತಿಂಗಳಲ್ಲೇ ಮತ್ತೆ ಕಿಟ್ ವಿತರಣೆಗೆ ಟೆಂಡರ್ ಕರೆದರು.ಈಗ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶಾಲಾ ಕಿಟ್ ಗಾಗಿ ತಲಾ ಒಂದಕ್ಕೆ ರೂ 8625 ರಂತೆ ಒಟ್ಟು 115 ಕೋಟಿ 84 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿತರಣೆಗೆ ಗುರುವಾರ ಸಚಿವ ಸಂಪುಟದಲ್ಲಿ ಮಂಜೂರು ಮಾಡಿದ್ದಾರೆ. ಇದು ಹಗರಣದ ಮುಂದುವರೆದ ಭಾಗ.ಟೆಂಡರ್ ಗಳನ್ನು ತಡೆಯಲು ಮತ್ತು ನಿಜವಾದ ಕಟ್ಟಡ ಕಾರ್ಮಿಕರಿಗೆ ಸಣ್ಣಪುಟ್ಟ ತಾಂತ್ರಿಕ ಸಮಸ್ಯೆಗಳಿಂದ ಅರ್ಜಿಗಳನ್ನು ತಿರಸ್ಕರಿಸದೆ ಸರಿಯಾಗಿ ಸೌಲಭ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಎಲ್ಲಾ ಕಟ್ಟಡ ಕಾರ್ಮಿಕರು ಹೋರಾಟಕ್ಕೆ ಸಿದ್ದರಾಗಬೇಕು ಎಂದು ಕರೆ ನೀಡಿದರು.ಕೊಪ್ಪಳ ತಾಲೂಕಿನ ಬಹಾದ್ದೂರ್ ಬಂಡಿ ಗ್ರಾಮದ ಗ್ರಾಮೀಣ ಕಟ್ಟಡ ಮತ್ತು ಇತರೆ ಕಾರ್ಮಿಕರ ಸಂಘದ ಅಧ್ಯಕ್ಷ ಮಹೆಬೂಬ್ ಎಸ್.ಮಣ್ಣೂರ ಮಾತನಾಡಿ ಸಂಘದ ನೇತೃತ್ವ ವಹಿಸುವವರು ತಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಪ್ರತಿಯೊಬ್ಬ ಕಾರ್ಮಿಕರ ಹಿತ ದೃಷ್ಟಿಯಿಂದ ಅವರಿಗೆ ಸರ್ಕಾರದಿಂದ ಸೌಲಭ್ಯಗಳು ಏನೇನು ಸಿಗುತ್ತವೆ ಅವುಗಳೆಲ್ಲ ಚಾಚು ತಪ್ಪದೇ ಮಾಡುತ್ತಾರೆ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಮಿಕ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ಕೊಪ್ಪಳ ತಾಲೂಕಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಶಹಾಬುದ್ದೀನ್ ಜವಳಗೇರ ವಹಿಸಿದ್ದರು.ವೇದಿಕೆ ಮೇಲೆ ತಾಲೂಕಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಜಾಫರ್ ಕುರಿ. ಉಪಾಧ್ಯಕ್ಷ ರಾಮಣ್ಣ ಬಣಕಾರ್.ಖಜಾಂಚಿ ಸಿದ್ದಲಿಂಗಪ್ಪ ಪಲ್ಲೇದ.ಮೌಲಾ ಹುಸೇನ್ ಹಣಗಿ. ಮಹೆಬೂಬ್ ಬಾಳೆಹಣ್ಣು. ಭಾಗ್ಯನಗರದ ಕಟ್ಟಡ ಕಾರ್ಮಿಕರ ಸಂಘದ ಮಾಜಿ ಅಧ್ಯಕ್ಷ ದೇವಪ್ಪ ಕಟ್ಟಿಮನಿ.ಹಿರಿಯ ಕಟ್ಟಡ ಕಾರ್ಮಿಕ ಮುಖಂಡ ದೇವೇಂದ್ರಪ್ಪ. ಹುಸೇನಪ್ಪ ಗುಡಿ.ಖಾಜಾಸಾಬ್ ಕಮ್ತರ.ವಹಾಬ್ ಸಾಬ್ ಚಾರ್ಲಿ ಮೇಸ್ತ್ರಿ.ಇಂಜಿನಿಯರ್ ಮೊಹಮ್ಮದ್ ಎಜಾರುಚ ಖಾನ್. ಮೊಹಮ್ಮದ್ ಖಾಲಿದ್ ಸಿದ್ದೀಕಿ.ಸೋಮಣ್ಣ ಧನಕರ. ಇಸ್ಮಾಯಿಲ್ ಸಾಬ್ ಕಮತರ. ಇಸ್ಮಾಯಿಲ್ ಸಾಬ್ ಕೋಲ್ಕಾರ. ತಿಪ್ಪಣ್ಣ ಬಿಸರಹಳ್ಳಿ. ಈಬತ್ತಿ ಮಂಜುನಾಥ.ನಿಂಗಪ್ಪ ಸುಣಗಾರ.ಮಹೆಬೂಬ್ ಸಿಕ್ಕಲಗಾರ.ದೇವಪ್ಪ ಚಿಗರಿ ಮುಂತಾದವರು ಉಪಸ್ಥಿತರಿದ್ದರು.

ಕಟ್ಟಡ ಕಾರ್ಮಿಕ ಸಂಘಟನೆಯ ಹಿರಿಯ ಮುಖಂಡರಾದ ರಮೇಶ್ ಘೋರ್ಪಡೆ.ಕಾರ್ಮಿಕ ಇಲಾಖೆಯ ಹೆಮಂತ್ ಸಿಂಗ್ ಮುಂತಾದವರು ಮಾತನಾಡಿದರು. ಕಾರ್ಯಕ್ರಮಕ್ಕೂ ಮೊದಲು ನಗರದ ಗವಿಮಠದಿಂದ ಗಡಿಯಾರ ಕಂಭದವರಿಗೆ ಕಟ್ಟಡ ಕಾರ್ಮಿಕರ ಬೃಹತ್ ಮೆರವಣಿಗೆ ನಡೆಯಿತು. ತಾಲೂಕಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಪ್ರಧಾನಿ ಕಾರ್ಯದರ್ಶಿ ಹರ್ಝುರತ ಅಲಿ ಮುಜಾವರ ಸ್ವಾಗತಿಸಿ. ನಿರೂಪಿಸಿ.ಕೊನೆಯಲ್ಲಿ ವಂದಿಸಿದರು.

# ಲೋಕಮಾತೆ ಮಹಾಲಕ್ಷ್ಮಿದೇವಿ ದ್ವಾರ ಬಾಗಿಲು ಲೋಕಾರ್ಪಣೆ

ಕನ್ನಡ ಮಾತೃ ಭೂಮಿ ವಾರ್ತೆ

**ಅಫಜಲಪೂರ,** ಮತಕ್ಷೇತ್ರದ ಹಿಂಚೇಗೇರಾ ಗ್ರಾಮ ದಲ್ಲಿ, ಗ್ರಾಮ ದೇವತೆ ಶ್ರೀ ಮಹಾ ಲಕ್ಷ್ಮೀ ದೇವಿಯ ಮಹಾದ್ವಾರದ ಲೋಕಾ ರ್ಪಣೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.ಕಾರ್ಯಕ್ರಮದ ದಿವ್ಯ ಸಾನಿಧ್ಯದಲ್ಲಿ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಹಾಗೂ ಗ್ರಾಮಸ್ಥರ ಭಕ್ತಿ ಭಾವಪೂರ್ಣ ಉಪಸ್ಥಿತಿಯಲ್ಲಿ ಮಹಾದ್ವಾರದ ಉದ್ಘಾಟನೆ ಸಮಾರಂಭವು ಭಕ್ತಿ ಶ್ರದ್ಧೆಯಿಂದ ನೆರವೇರಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕೆಕೆಆರಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ನಮ್ಮ ಆತ್ಮೀಯರು, ಅಫಜಲಪೂರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಶರಣು ಕುಂಬಾರ ಹಾಗೂ ಅವರ ಸಹೋದರರಾದ ಲಕ್ಷ್ಮಿಪುತ್ರ ಕುಂಬಾರವರು, ತಮ್ಮ ಸ್ವಂತ ಖರ್ಚಿನಲ್ಲಿ ಗ್ರಾಮದ ಅಧಿದೇವತೆ ಮಹಾಲಕ್ಷ್ಮೀ ದೇವಿಯ ಮಹಾದ್ವಾರವನ್ನು ನಿರ್ಮಿಸಿರುವುದು ನಿಜಕ್ಕೂ ಶ್ಲಾಘನೀಯ, ಆದರ್ಶಪ್ರಾಯ ಹಾಗೂ ಸಮಾಜಮುಖಿ ಸೇವಾಕಾರ್ಯವಾಗಿದೆ.

ಧರ್ಮ, ಸಂಸ್ಕೃತಿ, ಭಕ್ತಿ ಮತ್ತು ಸಮಾಜಸೇವೆಯ ಅಪೂರ್ವ ಸಂಗಮವಾಗಿರುವ ಈ ಕಾರ್ಯವು ಗ್ರಾಮಸ್ಥರಲ್ಲಿ ಆಧ್ಯಾತ್ಮಿಕ ಚೈತನ್ಯ ಮೂಡಿಸುವುದರ ಜೊತೆಗೆ, ಮುಂದಿನ ಪೀಳಿಗೆಗೆ ನಮ್ಮ ಪರಂಪರೆ ಮತ್ತು ಮೌಲ್ಯಗಳ ಮಹತ್ವವನ್ನು ಸಾರುವ ದಾರಿದೀಪವಾಗಿದೆ. ಇಂತಹ ಪುಣ್ಯಕಾರ್ಯಕ್ಕೆ ಕೈಜೋಡಿಸಿದ



ಶರಣು ಕುಂಬಾರ ಸಹೋದರರರು ಸೇವಾಭಾವ, ದೈವಭಕ್ತಿ ಮತ್ತು ಸಮಾಜದ ಮೇಲಿನ ಕಾಳಜಿ ನಿಜಕ್ಕೂ ಅನುಕರಣೀಯವಾಗಿದೆ. ಅವರ ಈ ಮಹತ್ತರ ಕೊಡುಗೆಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ, ಗೌರವಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ದೈವಿಶಕ್ತಿಯ ಭಾವ ಎಲ್ಲಿ ಅಡಗಿರುತ್ತದೆಯೋ ಅಲ್ಲಿ ಶಾಂತಿ ನೆಮ್ಮದಿಯ ಬದುಕು ನೆಲೆಸುತ್ತದೆ ಎಂದರು.

ನಂತರ ಪಿಯುಸಿ ಮತ್ತು ಎಸ್ಎಸ್ಎಲ್‌ಸಿ ಎಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಸಾಧನೆಗೈದ ಸ್ವ-ಗ್ರಾಮದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಈ ಸಂಧರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ ಪೂಜಾರಿ, ಪ್ರ.ಕಾರ್ಯದರ್ಶಿ ಶಿವಾನಂದ ಗಾಡಿ ಸಾಹುಕಾರ,ಸುಭಾಷ ರೋಗಿ,ಕಲ್ಯಾಣಿ ಸಿಂದಗೇರಿ, ಮಕ್ತುಂ ಪಟೇಲ್, ವಿಠ್ಠಲ ನಾಟಿಕರ,ಶರಣು ಈಶ್ವರಗೊಂಡ, ಸಾತಲಿಂಗಪ್ಪ ಧಸ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ದರ್ವೇಸು ಸಂಘದ ವತಿಯಿಂದ ಕೂಲಿ ಕಾರ್ಮಿಕರಿಗೆ ಸನ್ಮಾನ

ಕನ್ನಡ ಮಾತೃ ಭೂಮಿ ವಾರ್ತೆ

**ಮುದಗಲ್,** ಕಲ್ಯಾಣ ಕರ್ನಾಟಕ ದರ್ವೇಸು ಅಲೆ ಮಾರಿ ಅರೆ ಅಲೆಮಾರಿ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮೇ 1 ಕಾರ್ಮಿಕ ದಿನಾಚರಣೆ ಅಂಗವಾಗಿ ಬಸ್ ನಿಲ್ದಾಣದ ಕೂಲಿ ಕಾರ್ಮಿಕರಾದ ಸುಲೇಮಾನ್ ಮತ್ತು ಬಿಟ್ಟು ಪಟೇಲ್ ಅವರಿಗೆ ರಹೀಮ್ ಷಾ ಮಕಂದಾರ ಅವರು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿ ಕಾರ್ಮಿಕ ದಿನಾಚ ರಣೆ ಶುಭಾಶಯ ಕೋರಿದರು.

ಈ ಸಂದರ್ಬದಲ್ಲಿ ಬಸ್ ಕಂಟ್ರೋಲರ್ ಜಾಫರ್ ಶರೀಫ್, ಖಾಜಾ ವಲಿ ಮಸ್ಕಿ, ಮಹೆ ಬೂಬ್ ಪಾಷಾ, ಲಕ್ಷ್ಮಣ ಬಾಗಲೆ ರಸೂಲ್ ಷಾ,



ಶರ್ಬೀ, ಹುಸೇನ್ ಬಾಷಾ, ಅಬ್ದುಲ್, ಸೇರಿದಂತೆ ಮುಂತಾದವರು ಇದ್ದರು.

# ವಿಶ್ವಕ್ಕೆ ಜ್ಞಾನದ ಬೆಳಕು, ಶಾಂತಿ ನೀಡಿದವರು ಭಗವಾನ್ ಬುದ್ಧ - ವೆಂಕಟೇಶ ದೊಡ್ಡಮನಿ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,** ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಲ್ಲೊಂದಾದ ತಾರಾನಾಥ ಶಿಕ್ಷಣ ಸಂಸ್ಥೆ ಸಂಚಾಲಿತ ಚನ್ನಬಸಮ್ಮ ಎಂ. ನಾಗಪ್ಪ ಬಾಲಕಿಯರ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ, ದಿನಾಂಕ 01-05-2026 ರಂದು ಬೆಳಿಗ್ಗೆ 8.30ಕ್ಕೆ, ವಿಶ್ವಜ್ಞಾನದ ಪ್ರತೀಕವಾದ ಭಗವಾನ್ ಬುದ್ಧರ 2570ನೇ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಗೋವಿಂದ ರಾಜ್ ಮತ್ತು ಮಹೇಶ್ ಅವರು ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಪ್ರಾಚಾರ್ಯರಾದ ವೆಂಕಟೇಶ ದೊಡ್ಡಮನಿ ಹಾಗೂ ಉದಯಕುಮಾರ್ ಅವರು ಹಾರಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ನಂತರ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಪುಷ್ಪಾರ್ಚನೆ ಮಾಡಿ ನಮಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಪ್ರಾಚಾರ್ಯರಾದ ವೆಂಕಟೇಶ ದೊಡ್ಡಮನಿ ಅವರು, ಭಗವಾನ್ ಬುದ್ಧರ ಜೀವನ ಮತ್ತು ಉಪದೇಶಗಳ ಮಹತ್ವವನ್ನು ವಿವರಿಸಿದರು. ಅವರು ಕ್ರಿ.ಪೂ. 563ರಲ್ಲಿ ವೈಶಾಖ ಪೂರ್ಣಿಮೆಯಂದು ಲುಂಬಿನಿ ವನದಲ್ಲಿ ಜನಿಸಿದರು. ಅವರ ತಂದೆ ಶುದ್ಧೋದನ ಹಾಗೂ ತಾಯಿ ಮಾಯಾದೇವಿ. ಜನನದ ಕೆಲವೇ ದಿನಗಳಲ್ಲಿ ತಾಯಿಯನ್ನು ಕಳೆದುಕೊಂಡ ಬುದ್ಧರು ಮಹಾಪ್ರಜಾಪತಿ ಗೌತಮಿಯ ಆಶ್ರಯದಲ್ಲಿ ಬೆಳೆದರು. ಅವರ ಮೂಲ ಹೆಸರು ಸಿದ್ಧಾರ್ಥ.

ಸಿದ್ಧಾರ್ಥನು ಬಾಲ್ಯದಿಂದಲೇ ಜ್ಞಾನ ಪಿಪಾಸಿಯಾಗಿದ್ದು, ವೇದಗಳು, ಉಪನಿಷತ್ತುಗಳು ಹಾಗೂ ದರ್ಶನ ಶಾಸ್ತ್ರಗಳಲ್ಲಿ ಪಾಂಡಿತ್ಯ ಹೊಂದಿದನು. ಯಶೋಧರೆಯೊಂದಿಗೆ ವಿವಾಹವಾದ ಅವರಿಗೆ ರಾಹುಲ್ ಎಂಬ ಪುತ್ರನಿದ್ದನು. ಐಶ್ವರ್ಯಮಯ ಜೀವನದಲ್ಲಿ ಬೆಳೆದಿದ್ದರೂ, ವೃದ್ಧ, ರೋಗಿ ಮತ್ತು ಮೃತ ವ್ಯಕ್ತಿಗಳನ್ನು ಕಂಡು ಜೀವನದ ನಶ್ವರತೆಯನ್ನು ಅರಿತುಕೊಂಡ ಸಿದ್ಧಾರ್ಥನು ವೈರಾಗ್ಯ ತಾಳಿ ಸತ್ಯದ ಹುಡುಕಾಟಕ್ಕಾಗಿ ಗೃಹತ್ಯಾಗ ಮಾಡಿದನು.

ಬೋಧಿವೃಕ್ಷದ ಕೆಳಗೆ ತಪಸ್ಸು ನಡೆಸಿ ಜ್ಞಾನೋದಯವನ್ನು ಪಡೆದ ಬುದ್ಧರು, ಆಸೆಯೇ ದುಃಖಕ್ಕೆ ಮೂಲ ಎಂಬ ತತ್ವವನ್ನು ಸಾರಿದರು. ಅಷ್ಟಾಂಗ ಮಾರ್ಗಗಳಾದ ಸಮ್ಯಕ್ ದೃಷ್ಟಿ, ಸಂಕಲ್ಪ, ವಾಕ್ಯ, ಕರ್ಮ, ಜೀವನೋಪಾಯ, ಪ್ರಯತ್ನ, ಸ್ಮೃತಿ ಮತ್ತು ಸಮಾಧಿ ಮೂಲಕ ಮಾನವನು ಶಾಂತಿ ಮತ್ತು ಆತ್ಮಶುದ್ಧಿ ಪಡೆಯಬಹುದು ಎಂದು ಹೇಳಿದರು.

ಬುದ್ಧ ಪೂರ್ಣಿಮೆಯಂದು ಭಕ್ತರು ಧ್ಯಾನ, ಪ್ರಾರ್ಥನೆ ಹಾಗೂ ಧರ್ಮಶ್ರವಣಗಳಲ್ಲಿ ತೊಡಗುತ್ತಾರೆ. ಬುದ್ಧನ ಪ್ರತಿಮೆಗೆ ಹೂವು, ದೀಪ ಹಾಗೂ ಧೂಪ ಅರ್ಪಿಸಿ, ಉಪವಾಸ, ದಾನಧರ್ಮ, ಅನ್ನದಾನ ಮತ್ತು ಸೇವಾ ಕಾರ್ಯಗಳನ್ನು ನೆರವೇರಿಸುವುದು ಈ ಹಬ್ಬದ ಪ್ರಮುಖ ಅಂಶಗಳಾಗಿವೆ. ಬುದ್ಧರು ಸಾರನಾಥದಲ್ಲಿ ಧರ್ಮಚಕ್ರ ಪ್ರವೃತ್ತಿಯನ್ನು ಆರಂಭಿಸಿ, ಕುಶಿನಗ ರದಲ್ಲಿ ಮಹಾಪರಿನಿರ್ವಾಣವನ್ನು ಹೊಂದಿದರು. ಈ ಸ್ಥಳಗಳು ಬೌದ್ಧ ತತ್ವದ ಜೀವಂತ ಸಾಕ್ಷಿಗಳಾಗಿವೆ ಎಂದು ಹೇಳಿದರು.

ಇದೇ ವೇಳೆ ಉಪನ್ಯಾಸಕರಾದ ಗೋವಿಂದರಾಜ್ ಅವರು ಮಾತನಾಡಿ, ಬುದ್ಧ ಪೂರ್ಣಿಮೆ ಕೇವಲ ಆಚರಣೆಗೆ ಸೀಮಿತವಾಗದೇ, ಮಾನವನ ಮನಸ್ಸಿನ ಪರಿವರ್ತನೆಗೆ ದಾರಿ ತೋರಿಸುವ ಹಬ್ಬವಾಗಿದೆ. ಕ್ರೋಧ, ಲೋಭ ಮತ್ತು ಅಜ್ಞಾನವನ್ನು ತ್ಯಜಿಸಿ, ಶಾಂತಿ, ಕರುಣೆ ಮತ್ತು ಜ್ಞಾನವನ್ನು ಅಳವಡಿಸಿಕೊಳ್ಳುವ ಸಂದೇಶವನ್ನು ನೀಡುತ್ತದೆ ಎಂದು ಹೇಳಿದರು. ಇಂದಿನ ಜಗತ್ತಿನಲ್ಲಿ ಬುದ್ಧರ ತತ್ವಗಳು ಅತ್ಯಂತ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮೊಳಗಿನ ಶಾಂತಿಯನ್ನು ಕಂಡು ಸಮಾಜದಲ್ಲಿ ಸಹಾನುಭೂತಿ ಬೆಳೆಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ವೆಂಕಟೇಶ ದೊಡ್ಡಮನಿ, ಗೋವಿಂದರಾಜ್ ಹಾಗೂ ಮಹೇಶ್, ಉದಯಕುಮಾರ್, ಮಲ್ಲಿಕಾರ್ಜುನ, ಅಜೇಯ, ನರಸಪ್ಪ, ಚಂದ್ರು ಮತ್ತು ವಿದ್ಯಾರ್ಥಿನಿಯರಾದ ಜಮುನಾ, ಮಹಾಲಕ್ಷ್ಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ವಿವಿಧಡೆ ಬುದ್ಧ ಪೂರ್ಣಿಮಾ ಜಯಂತಿ ಆಚರಣೆ

ಕನ್ನಡ ಮಾತೃ ಭೂಮಿ ವಾರ್ತೆ

**ದೇವದುರ್ಗ,** ಸರ್ಕಾರಿ ಕಚೇರಿಗಳು, ಶಾಲೆಗಳು ಹಾಗೂ ಕಾಲೇಜುಗಳಲ್ಲಿ ವಿವಿಧಡೆ ಬುದ್ಧ ಪೂರ್ಣಿಮಾ ಜಯಂತಿಯನ್ನು ಆಚರಿಸಲಾಯಿತು. ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಹಶೀಲ್ದಾರ ನಾಗಮ್ಮ ಕಟ್ಟಿಮನಿ ಅವರು ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು.

ತಾಪಂ ಕಚೇರಿಯಲ್ಲಿ ಇಒ ಬಸವರಾಜ ಹಟ್ಟಿ ಅವರು ಕೂಡ ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಪುರಸಭೆ ಕಚೇರಿಯಲ್ಲಿ ಮುಖ್ಯಾಧಿಕಾರಿ ಕೆ. ಹಂಪಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸಿಡಿಪಿಒ ಮಹೇಶ್ ನಾಯಕ, ತಾಲೂಕು ಆರೋಗ್ಯ ಕಚೇರಿಯಲ್ಲಿ ಟಿಎಚ್ಒ ಡಾ. ಬನದೇಶ್ವರ, ಆರಕ್ಷಕ ವೃತ್ತದಲ್ಲಿ ಸಿಪಿಐ ವೈ.ಎನ್. ಗುಂಡುರಾವ್, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ, ಕ್ಷೇತ್ರ ಸಮನ್ವಯ ಕಚೇರಿಯಲ್ಲಿ ಶಿವರಾಜ ಪೂಜಾರಿ, ಪೊಲೀಸ್ ಠಾಣೆಯಲ್ಲಿ ಪಿಐ ಎಸ್. ಮಂಜುನಾಥ, ಬಾಪೂಜಿ ಸರ್ಕಾರಿ ಶಾಲೆಯಲ್ಲಿ ಮುಖ್ಯ ಶಿಕ್ಷಕ ರವಿ ಕುಮಾರ, ಮಾಳಗಡ್ಡೆ ಶಾಲೆಯಲ್ಲಿ ಮುಖ್ಯ ಶಿಕ್ಷಕ ಹನುಮಂತಪ್ಪ, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕ ಮೃತ್ಯುಂಜಯ ಹಾಗೂ ಜಿಪಂ ಕಚೇರಿಯಲ್ಲಿ ಎಇಇ ವಿಜಯಕುಮಾರ ರಾಠೋಡ್ ಅವರು ಬುದ್ಧ ಪೂರ್ಣಿಮಾ ಜಯಂತಿಯನ್ನು ಆಚರಿಸಿದರು.

ತಾಲೂಕು ಆಡಳಿತ ವತಿಯಿಂದ ಗೌತಮ ವಾರ್ಡ್‌ನ ಚಂದ್ರಮಣಿ ಬುದ್ಧ ವಿವಾಹ ಭವನದಲ್ಲಿ ವಿಶೇಷವಾಗಿ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬುದ್ಧ ಉಪಾಸಕರು ಪಂಚಶೀಲ ಬೋಧಿಸಿದರು.



ಕಾರ್ಯಕ್ರ ಮದ ಹಿನ್ನೆಲೆ ಸ್ಥಳವನ್ನು ವಿಶೇಷವಾಗಿ ಹೂವಿನ ಅಲಂಕಾರದಿಂದ ಸಿಂಗಾರಿಸಲಾಗಿತ್ತು. ಡಾ. ಬಿಆರ್ ಅಂಬೇಡ್ಕರ್ ವೃತ್ತದಲ್ಲಿಯೂ ವಿಶೇಷ ಹೂವಿನ ಅಲಂಕಾರ ಮಾಡಿ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ ನಾಗಮ್ಮ ಕಟ್ಟಿಮನಿ, ತಾಪಂ ಇಒ ಬಸವರಾಜ ಹಟ್ಟಿ, ಪುರಸಭೆ ಮುಖ್ಯಾಧಿಕಾರಿ ಕೆ. ಹಂಪಯ್ಯ, ಸಿಡಿಪಿಒ ಮಹೇಶ್ ನಾಯಕ, ಕ್ಷೇತ್ರ ಸಮನ್ವಯಾಧಿಕಾರಿ ಶಿವರಾಜ ಪೂಜಾರಿ ಸೇರಿದಂತೆ ಮಲ್ಲೇಶಪ್ಪ ಹುನುಗುಂಬಾಡ್, ನರಸಪ್ಪ ವಕೀಲ ಚಿಂಚೋಡಿ, ಮಲ್ಲಿಕಾರ್ಜುನ ಮಸರಕಲ್, ಚಂದ್ರಶೇಖರ ಛಲವಾದಿ, ಮಹಾಂತೇಶ ಭವಾನಿ, ರಂಗನಾಥ ಕುಂಭಿನ್, ಶಿವಪ್ಪ ಛಲವಾದಿ, ಮಲ್ಲಿಕಾರ್ಜುನ ಬೊಮ್ಮನಾಳ ಹಾಗೂ ಇತರರು ಉಪಸ್ಥಿತರಿದ್ದರು.

# ಸೋಲಾಪುರದಲ್ಲಿ ಬುದ್ಧ ಜಯಂತಿ ಸಂಭ್ರಮ: ಭವ್ಯ ಮೆರವಣಿಗೆ, ಸಾಧಕರ ಸನ್ಮಾನ

ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ್,** ಜೈ ಭಾರತ ಮಾತಾ ರಾಷ್ಟ್ರೀಯ ಸೇವಾ ಸಮಿತಿಯ ವತಿಯಿಂದ ಮಹಾ ರಾಷ್ಟ್ರ ರಾಜ್ಯದ ಸೋಲಾಪುರ ನಗರದಲ್ಲಿ ಶುಕ್ರವಾರ ಬುದ್ಧ ಜಯಂತಿಯನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ವೈಭವದಿಂದ ಆಚರಿಸಲಾಯಿತು. ಭಕ್ತಿ, ಶಾಂತಿ, ಸಮಾನತೆ ಮತ್ತು ರಾಷ್ಟ್ರೀಯ ಏಕತೆಯ ಸಂದೇಶ ಸಾರಿದ ಈ ಮಹೋತ್ಸವದಲ್ಲಿ ಸಾವಿರಾರು ಜನರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ನಗರದ ಪ್ರಮುಖ ಬೀದಿಗಳಲ್ಲಿ ಗೌತಮ ಬುದ್ಧ, ಬಸವಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಛತ್ರಪತಿ ಶಿವಾಜಿ ಮಹಾರಾಜ ಅವರ ಬೃಹತ್ ಮೂರ್ತಿಗಳನ್ನು ನಾಲ್ಕು ಪ್ರತ್ಯೇಕ ಅಲಂಕೃತ ವಾಹನಗಳಲ್ಲಿ ಇರಿಸಿ ಭವ್ಯ ಮೆರವಣಿಗೆ ನಡೆಸಲಾಯಿತು. ಮೂರ್ತಿಗಳಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿದ್ದು, ಸಾರ್ವಜನಿಕರು ಪುಷ್ಪವೃಷ್ಟಿ ಮಾಡಿ ಗೌರವ ಸಲ್ಲಿಸಿದರು.



ಮುಂಭಾಗದ ತೆರೆದ ಜೀಪ್‌ನಲ್ಲಿ ಜೈ ಭಾರತ ಮಾತಾ ರಾಷ್ಟ್ರೀಯ ಸೇವಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾದ ಹವಾ ಮಲ್ಲಿನಾಥ ಮಹಾರಾಜರು ಹಾಗೂ ಗಣ್ಯರು ಸಾಗಿದರು. ಮೆರವಣಿಗೆಯಲ್ಲಿ ಕಾರುಗಳ ಉದ್ದನೆಯ ಸಾಲು, ರಾಷ್ಟ್ರಧ್ವಜಗಳ ಅಲಂಕಾರ, ಛತ್ರಿ-ಚಾಮರ, ಬ್ಯಾಂಡ್, ಬಾಜಾ, ಡೊಳ್ಳು ಕುಣಿತ ಹಾಗೂ ವಿವಿಧ ಕಲಾ ತಂಡಗಳ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ಜಯಘೋಷಗಳಿಂದ ನಗರ ಮೊಳಗಿತು.

ಮೆರವಣಿಗೆ ನಂತರ ಹೆರಿಟೇಜ್ ಸಭಾಂಗಣದಲ್ಲಿ ಹವಾ ಮಲ್ಲಿನಾಥ ಮಹಾರಾಜರ ಸಾನಿಧ್ಯದಲ್ಲಿ ವೇದಿಕೆ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ರೈತರು, ಮಾಜಿ ಸೈನಿಕರು, ಸಾಮಾಜಿಕ ಕಾರ್ಯಕರ್ತರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಕಾರ್ಮಿಕರನ್ನು ಸತ್ಕರಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜೈ ಭಾರತ ಮಾತಾ ರಾಷ್ಟ್ರೀಯ ಸೇವಾ ಸಮಿತಿಯ ಭಾಲ್ಕಿ ತಾಲ್ಲೂಕು ಅಧ್ಯಕ್ಷ ಪಪ್ಪು ಪಾಟೀಲ ಖಾನಾಪುರ, ದಾಸರಾವ್ ಹಂಬಡೆ, ಶ್ಯಾಮ್ ಶಾಜಿ, ವಿಷ್ಣು ಮದಣೆ, ಡಾ. ನೀಲಂಗೆ, ಮಹಾದೇವ ರಾಠೋಡ್, ಬಾಬುರಾವ್ ಬೆಂಗಳೂರು, ಸಿದ್ಧಾರ್ಥ್ ತಲವಾರೆ, ಅಪ್ಪಾಸಾಹೇಬ್ ಬಿರಾದಾ, ಅರುಣ್ ಬಡದಾಳಕ, ರೇವಪ್ಪಯ್ಯ, ಗುರಿಸಿದ್ದಪ್ಪ, ವೈಜಿನಾಥ ರಝಳಕಿ, ಮಲ್ಲಿಕಾರ್ಜುನ ಸರ್ವಾಡ್, ವಿಜಯ್ ಪಾಟೀಲ, ಮಹೇಶ್ ರಗಟೆ, ಗಿರೀಶ್ ತಂಬಾಕೆ, ಹಣಮಂತ ಕವಳೆ, ಅಜಯ್ ಸಿಂದೆ, ಸಂಜಯ್ ಸಿಂದೆ, ಸಂತೋಷ್, ಶಿವಕುಮಾರ, ಉಮೇಶ್, ಅನಿಲ್ ಪಾಟೀಲ್, ಗಳಂಡೆ, ವಾಗಮೋಡೆ, ಶಕ್ತಿ ನೀಲಂಗೆ, ರಹಿಮತ್ ಸೈಯದ್, ಮಾಣಿಕ್ ಮೇತ್ರೆ, ಮಲ್ಲಿಕಾರ್ಜುನ ಎಂಟಮನಿ, ಶಾಮ್ ಸುಂದರ್ ಗಾಯಕವಾಡ್, ರಾಜಕುಮಾರ, ಅನಿಲಕುಮಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನವಲಿಂಗ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಯಶಸ್ಸು ತಂದರು.

ಶಾಂತಿ, ಸಮಾನತೆ, ದೇಶಭಕ್ತಿ ಹಾಗೂ ಸಾಮಾಜಿಕ ಜಾಗೃತಿಯ ಸಂದೇಶ ಸಾರಿದ ಈ ಬುದ್ಧ ಜಯಂತಿ ಮಹೋತ್ಸವ ಸೋಲಾಪುರದಲ್ಲಿ ಐತಿಹಾಸಿಕವಾಗಿ ಮೂಡಿಬಂದಿತು.

# ಬಯ್ಯಾಪೂರಗೆ ಅಸೀಮ ನಾಯಕ ಅನ್ವರಿಯವರಿಂದ ಸನ್ಮಾನ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರು,** ಇತ್ತೀಚಿಗೆ ಏ.18ರಂದು ಲಿಂಗಸ ಗೂರ ಪಟ್ಟಣದಲ್ಲಿ ಜರುಗಿದ ಮಾಜಿ ಕೇಂದ್ರ ಸಚಿವರಾದ ಬಸವರಾಜ ಪಾಟೀಲ್ ಅನ್ವರಿ ಇವರ 84 ನೇ ಹುಟ್ಟು ಹಬ್ಬದ ಅಭಿನಂದನಾ ಕಾರ್ಯಕ್ರಮ ಹಾಗೂ ಅಸಿಮ ನಾಯಕ ಅನ್ವರಿ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಅಚ್ಚುಕ ಟ್ಟಾಗಿ ನಡೆದು ಅದಕ್ಕೆ ಸಾಕ್ಷಿಯಾಗಿ ಶ್ರಮಿಸಿದ ಅಭಿನಂದನಾ ಸಮಿತಿಯ ಉಪಾಧ್ಯಕ್ಷರು ಹಾಗೂ ಅಮರೇಗೌಡ ಪಾಟೀಲ್ ಬಯ್ಯಾಪುರ ಮನೆಗೆ ಕೇಂದ್ರ ದ ಮಾಜಿ ಸಚಿವರಾದ ಬಸವರಾಜ ಪಾಟೀಲ್



ಅನ್ವರಿ ಅವರು ಭೇಟಿ ನೀಡಿ ಅಭಿಮಾನಪೂರ್ವಕವಾಗಿ ಅವರನ್ನು ಗೌರವಿಸಿ ಸನ್ಮಾನಿಸಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲೂಕಿನ ವಿವಿಧ ಪಕ್ಷಗಳ ಮುಖಂಡರಾದ ಹೆಚ್‌ಬಿ ಮುರಾರಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಭೂಪನಗೌಡ ಕರಡಕಲ್, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಬಸವರಾಜ ಗಣೇಕಲ್, ಮಹಾಂತೇಶ್ ಗೌರ್ಡ, ಬೀರಪ್ಪ ಪೂಜಾರಿ, ವೆಂಕನಗೌಡ, ಶರಣಪ, ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

# ಜಗತ್ತಿಗೆ ಶಾಂತಿ,ಅಹಿಂಸೆ ಸಂದೇಶ ಸಾರಿದ ಮಹನ್ ವ್ಯಕ್ತಿ ಭಗವಾನ್ ಬುದ್ದ- ನೀಲಕಂಠ ಬಡಿಗೇರ

ಕನ್ನಡ ಮಾತೃ ಭೂಮಿ ವಾರ್ತೆ

**ಕನಕಗಿರಿ,** ಪಟ್ಟಣದ ಹೊರ ವಲಯದಲ್ಲಿರುವ, ತಥಗತ ಗೌತಮ ಬದ್ಧ ವೃತ್ತದಲ್ಲಿ ಗೌತಮ ಬುದ್ದರ 2570ನೇ ಜಯಂತಿ (ಬುದ್ದ ಪೂರ್ಣಿ ಮೆ)ಯನ್ನು ಅರ್ಥಗರ್ಭಿತವಾಗಿ ಆಚರಿಸಲಾಯಿತು. ಈ ಸಂಧರ್ಭ ದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಯುವ ಮುಖಂಡ ನೀಲಕಂಠ ಬಡಿಗೇರ: ಬುದ್ದ ಅಂದರೆ ಜ್ಞಾನ, ಅದೊಂದು ಬೆಳಕು ವೈಚಾರಿಕ ತೆಯ ಪ್ರಜ್ಞೆ, ಸಮಾನತೆಯ ಹರಿಕಾರ, ಎಂದರೆ ತಪ್ಪಾಗಲಾರದು. ಬುದ್ದನ ಶಾಂತಿ ಮತ್ತು ಅಹಿಂಸೆಯನ್ನು ಇಡಿ ಜಗತ್ತೆ ಅಪ್ಪಿಕೊಂ ಡಿದೆ. ನಮ್ಮವರು ಹೊರ ದೇಶಕ್ಕೆ ಹೋದಾಗ ನಾನು ಬುದ್ದನ ನಾಡಿನಿಂದ ಬಂದವನು ಎನ್ನುತ್ತಾರೆ. ರಾಮ ರಹಿಮ ಅಲ್ಲಾನ ನಾಡಿ ನಿಂದಲ್ಲಾ, ಹೊರ ದೇಶದವರು ನಮ್ಮ ದೇಶಕ್ಕೆ ಬಂದಾಗ ಈ ನಾಡಿನ ಮಣ್ಣನ್ನು ಮುಟ್ಟಿ ನಮಸ್ಕರಿಸಿ, ತೆಗೆದುಕೊಂಡು ಹೋಗುತ್ತೇವೆ ಎನ್ನುತ್ತಾರೆ. ಇದೆ ಈ ಮಣ್ಣಿನ ಗುಣ ಆಂದಿನ ಸಮಾಜ ದಲ್ಲಿ ನೆಲೆಯೂರಿದ್ದ ಅಸಮಾನತೆ, ಜಾತಿ, ವರ್ಣ, ವರ್ಗ, ಅಸ್ಪೃಶ್ಯತೆ, ಮೂಢನಂಬಿಕೆ, ಕಂದಚಾರದ ವಿರುದ್ಧ ಜನಸಾಮಾನ್ಯರನ್ನು ಜಾಗೃತಗೊಳಿಸಿ ಸಮಾ ಸಮಾನತೆಯ ಬೌದ್ಧ ಧಮ್ಮವನ್ನು ಸ್ಥಾಪಿಸಿದರು. ಬುದ್ದನ ತತ್ವ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳೋಣ ಎಂದರು.

ನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿಗಳಾದ ವಿರುಪಾಕ್ಷಯ್ಯ ಮಾತನಾಡಿ, ಬುದ್ದರ ಸಂದೇಶಗಳು ಇಂದಿಗೂ ಪ್ರಸ್ತುತ ಅವರೊಬ್ಬ ದೊಡ್ಡ ರಾಜನ ಮಗ ರಾಜ್ಯಭಾರ ಮಾಡುತ್ತ ಆರಾಮಾಗಿ ಇರಬಹುದಿತ್ತು ಆದರೆ ಸಮಾಜದಲ್ಲಿ ಅನೇಕ ಘಟನೆಗಳು ಅವರ ಮೇಲೆ ಪ್ರಭಾವ ಬೀರಿ ಸಿದ್ದಾರ್ಥನನ್ನ ಬುದ್ದನನ್ನಾಗಿ ಮಾಡಿದವು. ಆಸೆಯೇ ದುಃಖಕ್ಕೆ ಮೂಲ ಎಂಬ ಮಾತು ಜಗದಜ್ಞಾಯಿರ. ಅತಿ ಆಸೆ ಮನುಷ್ಯನನ್ನು ಕೊಲ್ಲುತ್ತದೆ ಎಂದರು.ಹುಲಿಹೈದರ, ಗಂಗಾಧರ ಚೌಡ್ಕಿ, ಹರೀಶ್ ಕೋಳಿ, ಶಿವರಾಜ್ ಅಮರೇಶ ತೆಗ್ಗಿನಮನಿ, ಗಣೇಶ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಧರ್ಮದ ಹೆಸರಿನಲ್ಲಿ ಪರಸ್ಪರ ಬೇರ್ಪಡಿಸುವ ತಂತ್ರ ಮಾನವ ಕುಲಕ್ಕೆ ದುರಂತದ ಸಂಗತಿಯಾಗಿದೆ-ಡಾ.ಖಾಜಾವಲಿ



ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸುಗೂರ,** ಧರ್ಮ ಎಂಬ ಶಬ್ದಕ್ಕೆ ಬಹಳ ವಿಶಾ ಲವಾದ ಅರ್ಥವಿದೆ. ಆದರೆ ಅದನ್ನು ಕೆಲವರು ಸೀಮಿತ ಮತ್ತು ಸಂಕುಚಿತ ವಾಗಿ ಪರಿಭಾವಿಸುತ್ತಿದ್ದಾರೆ ಧರ್ಮ ಪ್ರತಿಯೊಬ್ಬರನ್ನು ಪರಸ್ಪರ ಒಂದುಗೂಡಿಸಬೇಕು. ದುರದೃಷ್ಟವಶಾ ತ್ ಇಂದು ಪರಸ್ಪರರನ್ನು ಬೇರ್ಪಡಿಸುವ ತಂತ್ರ ನಡೆಯುತ್ತಿರುವದು ಮಾನವ ಕುಲಕ್ಕೆ ದುರಂತದ ಸಂಗತಿಯಾಗಿದೆ ಎಂದು ಜೇವರ್ಗಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ, ಸಾಹಿತಿ ಡಾ. ಖಾಜಾ ವಲಿ ಈಚನಾಳ ಅಭಿಪ್ರಾಯ ಪಟ್ಟರು.

ಅವರು ತಾಲೂಕಿನ ಈಚನಾಳ ಗ್ರಾಮದ ಜಾಮಿಯಾ ಮಸ್ಜಿದ್ ನಲ್ಲಿ ಶುಕ್ರವಾರದ ವಿಶೇಷ ಪ್ರಾರ್ಥನೆಯ ನಂತರ ಜಾಮಿಯಾ ಮಜೀದ್ ವತಿಯಿಂದ ಹಮ್ಮಿಕೊಂಡ 2025-26ನೇ ಸಾಲಿನಲ್ಲಿ ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿ ಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಹೇಳಿದರು.

ಮುಂದುವರೆದು ಮಾತನಾಡಿದ ಅವರು ಧರ್ಮವೆಂದರೆ ಬರೀ ನಮಾಜು, ಪ್ರಾರ್ಥನೆ, ಪೂಜೆ-ಆರಾಧನೆ ಮಾತ್ರ ಅಲ್ಲ, ಇನ್ನೊಬ್ಬರ ಒಳಿತನ್ನು ಬಯಸು ವುದು, ಅಸಹಾಯಕರ ಕಣ್ಣೀರು ಒರಿಸು ವುದು ನಿಜವಾದ ಧರ್ಮವಾಗಿದೆ ಎಂದು ಮಾರ್ಮಿಕವಾಗಿ ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ಜೀವನದಲ್ಲಿ ಏನಾದರೂ ಸಾಧನೆ ಮಾಡಿ ಹೆತ್ತವರ ಮತ್ತು ಊರಿನ ಕೀರ್ತಿ ತರಲು ಕಠಿಣ ಪರಿಶ್ರಮದಿಂದ ಮುನ್ನುಗ್ಗಿದರೆ ಮಾತ್ರ ಸಾಧನೆಯ ಸಮೀಪ ಹೋಗಲು ಸಾಧ್ಯವಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಗಳು ಸಾಧಿಸುವ ಛಲದಿಂದ ಮುನ್ನುಗ್ಗ ಬೇಕಾಗಿದೆ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಮಾ ಅತ್ ಅಧ್ಯಕ್ಷ ಪೀರಸಾಬ್ ಪಂಚಮ್ ಅಧ್ಯಕ್ಷತೆ ವಹಿಸಿದ್ದರು. ಡಾ. ಖಾಜಾಸಾಬ್ ಅಂಕುಶ್, ರಾಜ ಮಹ್ಮದ್ ದೋಟಿಹಾಳ, ಖಾಜಾಸಾಬ್ ಸಾಗರ್ ಸಪ್ಲಾಯರ್ಸ, ಅಲಿಪಾಶಾ ಅಂಗಡಿ, ಬಾಷುಮಿಯ್ಯಾ ವೀರಾಪೂರ, ರಹಿಮಾನ್ ಸಾಬ್ ಮುಲ್ಲಾ,ಖಾದರಸಾಬ್, ಬಂದಗಿ ಸಾಬ್ ಮುಲ್ಲಾ, ಹಾಫೀಜ್ ಮೊಹಮ್ಮದ್ ಹುಸೇನ್,ಅಮೀರ್ ಪಾಷಾ, ಮಕ್ತುಮ್ ಸಾಬ್, ಮಿಯಾಸಾಬ್ ಟೈಲರ್, ಅಕ್ಬರಲಿ, ನಬಿಸಾಬ್, ಗೌಸ್ ಪೀರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಹಲವು ಬಗೆಯ ಸಂಕಷ್ಟಗಳಿಗೆ ದೇಶದ ಮಹಿಳೆ-ವಿನಯಾ ಒಕ್ಕುಂದ

ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,**ದೌರ್ಜನ್ಯ,ಅತ್ಯಾಚಾರ, ಶೋಷಣೆ, ಮಾನಸಿಕ ಹಿಂಸೆಯಂತಹ ಹಲವು ಬಗೆಯ ಸಂಕಷ್ಟಗಳಿಗೆ ದೇಶದ ಮಹಿಳೆ ಯರು ಒಳಗಾಗುತ್ತಿರುವುದು ಕಳವಳಕಾ ರಿಯಾದ ಸಂಗತಿ ಎಂದು ಹಿರಿಯ ಲೇಖಕಿ ಡಾ.ವಿನಯಾ ಒಕ್ಕುಂದ ಅಭಿಪ್ರಾಯಪಟ್ಟರು.

ನಗರದ ಅಕಾಡೆಮಿ ಆಫ್ ಮೆಡಿಕಲ್ ಎಜುಕೇಶನ್ ಸಂಸ್ಥೆಯ, ಎ ಎಂ ಇ ದಂತ ಮಹಾವಿದ್ಯಾಲಯದ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಲಿಂಗ ಸೂಕ್ಷ್ಮತೆಯ ಅರಿವು ಮತ್ತು ವ್ಯಕ್ತಿತ್ವ ನಿರ್ಮಿತಿ ಎನ್ನುವ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಲಿಂಗ ರಾಜಕಾರಣದಿಂದಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ನಿರಂತರವಾಗಿ ಶೋಷಣೆಗೆ ಈಡಾಗುತ್ತಲೇ ಇದ್ದಾರೆ. ಒಲೆ ಬದಲಾಗಿದ್ದರೂ ಉರಿ ಬದಲಾಗಿಲ್ಲ ಎನ್ನುವಂತಹ ಬಿಕ್ಕಟ್ಟಿನ ಪರಿಸ್ಥಿತಿ ಇಂದಿನ ಆಧುನಿಕ ಮಹಿಳೆಯರದಾಗಿದೆ ಎಂದರು.

ಹೆಣ್ಣಾಗಿ ಜಗತ್ತನ್ನು ನೋಡುವ ಕ್ರಮವನ್ನು ಗಂಡು ಮತ್ತು ಗಂಡಾಗಿ ನೋಡುವ ಮನೋಧರ್ಮವನ್ನು ಹೆಣ್ಣು ರೂಪಿಸಿಕೊಳ್ಳಬೇಕಾಗಿರುವುದು ಆರೋಗ್ಯಕರ ಸಮಾಜದ ಬಹು ದೊಡ್ಡ ಲಕ್ಷಣ ಎಂದು ಒತ್ತಿ ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಲೇಖಕ ದಸ್ತಗೀರಸಾಬ್ ದಿನ್ನಿ ವರ್ತಮಾನದ ಮಹಿಳೆ ಕೌಟುಂಬಿಕ ಅಸುರಕ್ಷತೆ, ಆರ್ಥಿಕ ಅಸಹಾಯಕತೆಯಿಂದಾಗಿ ಎಲ್ಲವನ್ನು ಮೂಕವಾಗಿ ಅನುಭವಿಸುತ್ತಲೇ ಮತ್ತೆ ಮತ್ತೆ ಅವಮಾನದ ಕೆಂಡವನ್ನು ಹಾಯುತ್ತಿದ್ದಾಳೆ.

ವಿನಯಾರವರ ಮಾತು ಗಳಲ್ಲಿ ಹೊಸ ಆಲೋಚನಾಕ್ರಮ, ಮನುಷ್ಯ ಪ್ರೇಮ,ಮಾನವೀಯ ಧೋ ರಣೆ ವ್ಯಕ್ತವಾಯಿತು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಖಜಾಂಚಿ ಭೀಮನಗೌಡ ಇಟಗಿ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಅಭಿರುಚಿ, ಆಪ್ತ ತಿಳುವಳಿಕೆ, ವೈಚಾರಿಕ ಪ್ರಜ್ಞೆ, ಸಮಾಜವನ್ನು ನೋಡುವ ಹೊಸ ಕಣ್ಣೋಟವನ್ನು ಕೊಡುತ್ತವೆ ಎಂದರು ,

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ದರೂರು ಬಸವರಾಜ ಪಾಟೀಲ್ ಯುವಸಮುದಾಯ ಬದುಕನ್ನು, ಸಮಾಜವನ್ನು ಪ್ರೀತಿಸಬೇಕು . ಉತ್ತಮ ಸಂವೇದನೆಯನ್ನು ಬೆಳೆಸಿಕೊಂಡು ಸಮಾನತೆಯ ಸಮಾಜಕ್ಕಾಗಿ ಮಿಡಿಯ ಬೇಕು ಎಂದರು.

ವೇದಿಕೆಯ ಮೇಲೆ ರಾಯಚೂರಿನ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಡಾ. ಕೆ. ವೆಂಕಟೇಶ್,ಪ್ರಾಚಾರ್ಯ ಡಾ.ಶಿವಾನಂದ ಆಸ್ಪಲ್ಲಿ, ಅಧ್ಯಾಪಕ ಡಾ. ರಾಘವೇಂದ್ರ ಹವಳೆ ಇದ್ದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅತಿಥಿಗಳೊಂದಿಗೆ ಸಂವಾದ ನಡೆಸಿದರು.

# ಕಾರ್ಮಿಕ ದಿನಾಚರಣೆ ಆಚರಣೆ



ಕನ್ನಡ ಮಾತೃ ಭೂಮಿ ವಾರ್ತೆ

**ಮುದಗಲ್,** ಪಟ್ಟಣದ ಕೃಷಿ ಉತ್ಪನ್ನ ಉಪ ಮಾರುಕಟ್ಟೆಯ ಶ್ರಮಿಕ ಭವನದ ಮುಂಭಾಗದಲ್ಲಿ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.ಶ್ರಮಿಕ ಭವನದಲ್ಲಿ ಹಮಾಲರ ಸಂಘದ ಅಧ್ಯಕ್ಷ ದವಾಲಸಾಬ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮರಿಸ್ವಾಮಿ. ಬಾಲಪ್ಪ, ಅಯ್ಯಪ್ಪ, ಯಂಕಪ್ಪ, ಅಯ್ಯಪ್ಪ ಕೆರಣ್ಣಿ , ಲಕ್ಷ್ಮಣ ಮಲ್ಲಪ್ಪ ಬಳುಟಗಿ ಇಬ್ರಾಹಿಂಸಾಬ್ ತುರವಿಹಾಳ. ಖಾಜಾ ಸಾಬ್, ಸೇರಿದಂತೆ ಇನ್ನಿತರ ಇದ್ದರು

# ಕಾರ್ಮಿಕ ದಿನಾಚರಣೆಯನ್ನು ಸರ್ಕಾರ ಅಧಿಕೃತವಾಗಿ ವ್ಯಾಪಕವಾಗಿ ಆಚರಿಸಲಿ: ಡಾ. ಲಕ್ಷ್ಮಣ ದಸ್ತಿ ಆಗ್ರಹ

ಕನ್ನಡ ಮಾತೃ ಭೂಮಿ ವಾರ್ತೆ



**ಕಲಬುರಗಿ,** ವಿಶ್ವ ಕಾರ್ಮಿಕ ದಿನಾಚರಣೆಯನ್ನು ಸರ್ಕಾರ ವಿನೂತನ ಮಾದರಿಯಲ್ಲಿ ಅಧಿಕೃತವಾಗಿ ರಾಜ್ಯದಾದ್ಯಂತ ಜಿಲ್ಲಾ, ತಾಲೂಕು, ನಗರ ಹಾಗೂ ಗ್ರಾಮ ಮಟ್ಟದಲ್ಲಿ ವ್ಯಾಪಕ ಸ್ವರೂಪದಲ್ಲಿ ಆಚರಿಸಲು ದಿಟ್ಟಕ್ರಮ ಕೈಗೊಳ್ಳಬೇಕು ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿ ಸರ್ಕಾರವನ್ನು ಆಗ್ರಹಿಸಿದರು.

ನಗರದ ಅಂಬೇಡ್ಕರ್ ವೃತ್ತದಲ್ಲಿ ನವ ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಆಯೋಜಿಸಿದ್ದ ಬೃಹತ್ ಕಾರ್ಮಿಕ ದಿನಾಚರಣೆ ಕಾರ್ಯಕ್ರ ಮದಲ್ಲಿ ಮಾತನಾಡಿದ ಅವರು, ದೇಶ ಹಾಗೂ ರಾಜ್ಯದ ಬಹುಸಂ ಖ್ಯಾತ ವರ್ಗಕ್ಕೆ ಸೇರಿದ ಕಾರ್ಮಿಕರ ದಿನಾಚರಣೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ಕಾರ್ಮಿಕರ ಕಲ್ಯಾಣಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗಳನ್ನು ಜಾರಿಗೆ ತಂದಿದ್ದರೂ, ಕಾರ್ಮಿಕರ ಹಕ್ಕುಗಳು ಹಾಗೂ ಅವರಿಗೆ ದೊರೆಯಬೇಕಾದ ಸೌಲಭ್ಯಗಳ ಕುರಿತು ಸಮರ್ಪಕ ಜಾಗೃತಿ ಮೂಡಿಸುವ ಕಾರ್ಯ ನಡೆಯುತ್ತಿಲ್ಲ. ಹೀಗಾಗಿ ಕಾರ್ಮಿಕ ದಿನಾಚರಣೆಗೆ ವಿಶೇಷ ಆದ್ಯತೆ ನೀಡಿ, ಸರ್ಕಾರದ ವತಿಯಿಂದಲೇ ಅಧಿಕೃತ ಆಚರಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ 371(ಜೆ) ವಿಶೇಷ ಸ್ಥಾನಮಾನ ದೊರಕಲು ಹಲವು ದಶಕಗಳ ಹೋರಾಟ, ಸಂಘ-ಸಂಸ್ಥೆಗಳ ಬೆಂಬಲ ಹಾಗೂ ರಾಜಕೀಯ ಇಚ್ಛಾಶಕ್ತಿ ಕಾರಣವಾಗಿದೆ. ಈ ಹೋರಾಟದಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಅವರು ಸ್ಮರಿಸಿದರು.

ಮಾಜಿ ಕಾರ್ಮಿಕ ಸಚಿವ ಎಸ್.ಕೆ. ಕಾಂತಾ ಮಾತನಾಡಿ, ಪ್ರಸ್ತುತ ಕಾರ್ಮಿಕರಿಗೆ ನ್ಯಾಯಸಮ್ಮತ ಹಕ್ಕುಗಳು ಸಿಗುತ್ತಿಲ್ಲ. ಎಲ್ಲಾ ಕ್ಷೇತ್ರಗಳ ಕಾರ್ಮಿಕರು ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕಾಗಿದೆ ಎಂದರು.

ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, ನವ ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘವು ವಿಶ್ವ ಕಾರ್ಮಿಕ ದಿನಾಚರಣೆಯನ್ನು ವ್ಯವಸ್ಥಿತವಾಗಿ ಹಾಗೂ ಬೃಹತ್ ಪ್ರಮಾಣದಲ್ಲಿ ಆಯೋಜಿಸಿರುವುದು ಶ್ಲಾಘನೀಯ. ಕಟ್ಟಡ ಕಾರ್ಮಿಕರ ನ್ಯಾಯಸಮ್ಮತ ಬೇಡಿಕೆಗಳಿಗೆ ತಾವು ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಕುಮಾರ್ ಬುರಡಕಟ್ಟಿ, ಮನೋಜಕುಮಾರ್ ಗುದಿ, ಕಾರ್ಮಿಕ ಅಧಿಕಾರಿ ಶರಣಪ್ಪ ಅಳ್ಳಿಮನಿ, ಕಾಂಗ್ರೆಸ್ ಮುಖಂಡ ಲಿಂಗರಾಜ ತಾರಫೈಲ್ ಸೇರಿದಂತೆ ಹಲವರು ಮಾತನಾಡಿ ಕಾರ್ಮಿಕರ ಹಕ್ಕುಗಳು, ಕಲ್ಯಾಣ ಯೋಜನೆಗಳು ಹಾಗೂ ಸಾಮಾಜಿಕ ನ್ಯಾಯದ ಕುರಿತು ಅಭಿಪ್ರಾಯ ಹಂಚಿಕೊಂಡರು.

ಸಂಘದ ಅಧ್ಯಕ್ಷ ಭೀಮರಾಯ ಕಂದಳ್ಳಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರವೀಣ ದೊಡ್ಡಮನಿ, ಅನೀಲಕುಮಾರ ಗಂಗಾಣಿ, ಮನೀಷ್ ವೈಕುಂಠ,

ರಾಘವೇಂದ್ರ ಚಿಂಚೋಳಿ, ರಾಜು ಜಮಾದಾರ, ಮುತ್ತಣ್ಣ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಿದ್ದರು.

# ಭಗವಾನ್ ಬುದ್ಧ ಜಯಂತಿ ಆಚರಣೆ



ಕನ್ನಡ ಮಾತೃ ಭೂಮಿ ವಾರ್ತೆ


**ಮುದಗಲ್,** ಪಟ್ಟಣದ ಪುರಸಭೆ ಕಾರ್ಯಾ ಲಯ, ನಾಡ ಕಾರ್ಯಾಲಯ, ರೈತ ಸಂಪರ್ಕ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ದಲ್ಲಿ ಭಗವಾನ್ ಬುದ್ಧ ಜಯಂತಿ ಆಚರಣೆ ಮಾಡಿದರು.

ಪುರಸಭೆ ಕಾರ್ಯಾಲಯದಲ್ಲಿ ಸಿಬ್ಬಂದಿ ಚನ್ನಮ ದಳವಾಯಿಮಠ ಭಗವಾನ್ ಬುದ್ಧನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ವ್ಯವ ಸ್ಥಾಪಕರು ಸುರೇಶ್ ಹೊನ್ನಳ್ಳಿ, ಕಂದಾ ಯ ನಿರೀಕ್ಷಕರು ಅಂತೋಣಿ ರಾಜ್ , ಸಿಬ್ಬಂದಿ ನಿಸಾರ್ ಅಲಿ, ಮುಖಂಡ ರಜ್ಜಬ್ ಅಲಿ ಟಿಂಗ್ರಿ, ಶಬೀರ್ ಅಲಿ, ಹುಸೇನ್ ಬಾಷಾ, ಲಖನ್ ಛಲವಾದಿ , ಸೇರಿದಂತೆ ಮುಂತಾದವರು ಇದ್ದರು.

# ಎಸ್‌ಎಸ್‌ಎಲ್‌ಸಿ ಸಾಧನೆ : ವಿಧ್ಯಾರ್ಥಿಗಳಿಗೆ ಸನ್ಮಾನ

ಕನ್ನಡ ಮಾತೃ ಭೂಮಿ ವಾರ್ತೆ



**ಲಿಂಗಸುಗೂರ,** ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಮುಸ್ಲಿಂ ಸಮುದಾಯದ ಮಕ್ಕಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಪಟ್ಟಣದ ಜಾಮಿಯಾ ಮಸ್ಜಿದ್ ನಲ್ಲಿ ಶುಕ್ರವಾರದ ವಿಶೇಷ ಪಚ್ರಾರ್ಥನೆ ಬಳಿಕ ತಂಜಿಮುಲ್ ಮುಸ್ಲಿಮಿನ್ ಕಮೀಟಿ ವತಿಯಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚು ಪ್ರತಿಶತ ಅಂಕ ಪಡೆದ, ಶೇಕ್ ಮಹ್ಮದ್ ಜುಬೇರ ತಂದೆ ಶೇಕ್ ಖಾಜಾಮಿಯಾ (ಶೇ.97), ಮಹಮ್ಮದ್ ಅಶ್ರಫ್ ಹುಸೇನ್ ತಂದೆ ಮಹಮ್ಮದ್ ಖಾಜಾಹುಸೇನ್ (ಶೇ.91.52), ಮಹಮ್ಮದ್ ಆಲಮಲಿ ತಂದೆ ಸಾದತಲಿ (ಶೇ.90.56) ಇವರುಗಳಿಗೆ ಸಿಹಿ ಖರ್ಜೂರ ತಿನ್ನಿಸಿ ಗೌರವಿಸುವ ಮೂಲಕ, ಭವಿಷ್ಯದಲ್ಲಿ ಉತ್ತಮವಾಗಿ ಅಭ್ಯಾಸ ಮಾಡಿ ಪಾಲಕರಿಗೆ ಮತ್ತು ಊರಿಗೆ ಕೀರ್ತಿ ತರುವಂತೆ ಅಲ್ಲಾಹನು ಬುದ್ಧಿ ಶಕ್ತಿ ನೀಡಲೆಂದು ಮೌಲಾನಾ ಹಫೀಜ್ ಇಸ್ಮಾಯಿಲ್ ಶುಭ ಹಾರೈಸಿದರು.

ಕಮಿಟಿ ಉಪಾಧ್ಯಕ್ಷ ಖಾದರಬಾಷಾ ಮುಖಂಡರಾದ ನಬಿಸಾಬ್ ಮನಿಯಾರ, ಇಕ್ಬಾಲಸಾಬ, ಬಾಬಾ ಖಾಜಿ, ಶೇಕ್ ಇಬ್ರಾಹಿಂ, ಫೈಸಲ್ ಚಾವೂಸ್, ಅಹ್ಮದ ಸಾಬ್, ಮೈನುದ್ದಿನ, ತಾಜುದ್ದೀನ್, ಮೌಲಾಸಾಬ್ ಭೂಪುರ, ಖಾಜಾ ಹುಸೇನ್ ಕರ್ನಾಚಿ, ಮಹೆಬೂಬಲಿ ಸೇರಿ ಇತರರು ಉಪಸ್ಥಿತರಿದ್ದರು.

# ಕಾರ್ಮಿಕ ದಿನಾಚರಣೆಯಂದೇ ಕಾರ್ಮಿಕರಿಗೆ ನಡೆದ ದೊಡ್ಡ ದುರಂತ-ಸಿದ್ದಪ್ಪ

ಕನ್ನಡ ಮಾತೃ ಭೂಮಿ ವಾರ್ತೆ



**ಬಳ್ಳಾರಿ,** ಕಾರ್ಮಿಕ ದಿನಾಚರಣೆದಂದು ಕಾರ್ಮಿಕರಿಗೆ ನಡೆದ ದುರಂತದ ಘಟನೆ ಸಿರುಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ.

ಶುಕ್ರವಾರದಂದು ( ಚಾಮರಾಜನಗರ ದಿಂದ ಬೀದರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ) ಸಿಂದಿಗೇರಿ ಗ್ರಾಮದಿಂದ ಶಾನವಾಸಪುರ ಗ್ರಾಮಕ್ಕೆ ತೆರಳುವ ದಾರಿಯ ಮಧ್ಯದಲ್ಲಿ ಕಾರ್ಮಿಕರು ಮನೆ ಕಟ್ಟಲು ಬುನಾದಿ ಕಲ್ಲುಗಳನ್ನು ತರುವಂತ ಸಂದರ್ಭದಲ್ಲಿ ಏಕಾಏಕಿ ಟ್ಯಾಕ್ಟರ್ ಲಿಫ್ಟ್ ಮೇಲೆತ್ತಿರುವ

ಕಾರಣ ಟ್ಯಾಕ್ಟರ್ ಹಿಂದಗಡೆ ಕೂತಂತವರಿಗೆ ಕಲ್ಲುಗಳ ಮೇಲೆ ಬಿದ್ದು 6 ಜನರಲ್ಲಿ ಸುರೇಂದ್ರ ಅವರಿಗೆ ಎರಡು ಕಾಲು ಮುರಿದಿದ್ದು ಅಂಬರೀಶ್ ಅವರಿಗೆ ಬೆನ್ನು ಮೂಳೆ ಮುರಿದಿದ್ದು ಇನ್ನು ನಾಲ್ಕು ಜನಕ್ಕೆ ಶ್ರೀಕಾಂತ್ ,ಬಸವರಾಜ್ , ಮಣಿಕಂಠ ಮತ್ತು ಶೇಖರ್ ಅವರಿಗೆ ಗಾಯಗಳಾಗಿದ್ದ ಘಟನೆ ನಡೆದಿದೆ.

ವಿಷಯ ತಿಳಿಸಿದ ತಕ್ಷಣ ಎಂ.ಎಸ್. ಸಿದ್ದಪ್ಪ ಬಳ್ಳಾರಿಯ ಬಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಾಧಿಕಾರಿಗಳ

ಜೊತೆ ಮಾತನಾಡಿ ಹೆಚ್ಚಿನ ಚಿಕಿತ್ಸೆ ನೀಡಬೇಕೆಂದು ಮುಖ್ಯ ವೈದ್ಯಾಧಿಕಾರಿಗಳಲ್ಲಿ ಮನವಿ ಮಾಡಿ ಮಾನವೀಯತೆ ಮೆರೆದಿದ್ದಾರೆ.

# ಬುದ್ಧರ ತತ್ವಗಳು ವಿಶ್ವನಾಗರಿಕತೆಗೆ ದಿಕ್ಕು ತೋರಿವೆ: ಡಿಸಿ ಹರ್ಷಲ್ ಭೋಯರ್

ಕನ್ನಡ ಮಾತೃ ಭೂಮಿ ವಾರ್ತೆ



**ಯಾದಗಿರಿ,**ಭಗವಾನ್ ಗೌತಮ ಬುದ್ಧರ ತತ್ವಸಿದ್ಧಾಂತಗಳು ವಿಶ್ವ ನಾಗರಿಕತೆಗೆ ದಿಕ್ಕು ತೋರಿದ್ದು, ಸಮಾಜದ ಪರಿವರ್ತನೆಗೆ ಮಹತ್ವದ ಕೊಡುಗೆ ನೀಡಿವೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಹೇಳಿದರು.

ನಗರದ ಲುಂಬಿನಿ ಉದ್ಯಾನವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಭಗವಾನ್ ಬುದ್ಧ ಜಯಂತ್ಯೋತ್ಸವ ಸಮಿತಿಯ ಸಹಯೋಗದಲ್ಲಿ ಆಯೋಜಿಸಿದ್ದ ಬುದ್ಧ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಬೋಧಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ, ಬುದ್ಧರ ಭಾವಚಿತ್ರ ಹಾಗೂ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಜಾತಿ ವ್ಯವಸ್ಥೆಯನ್ನು ಮೊದಲ ಬಾರಿಗೆ ವಿರೋಧಿಸಿದವರು ಗೌತಮ ಬುದ್ಧರು. ಅವರ ಅಹಿಂಸಾ ಮಾರ್ಗ ಹಾಗೂ ತತ್ವಜ್ಞಾನವು ಮಾನವ ಜೀವನಕ್ಕೆ ದಾರಿದೀಪವಾಗಿದೆ. ಸಾಮ್ರಾಟ ಅಶೋಕರ ಕಾಲದಲ್ಲಿ ಬುದ್ಧರ ಸಂದೇಶಗಳು ಸ್ಥಳೀಯ ಭಾಷೆಗಳ ಮೂಲಕ ಭಾರತದಿಂದ ದಕ್ಷಿಣ ಪೂರ್ವ ಏಷ್ಯಾ ಮತ್ತು ಅಫ್ಘಾನಿಸ್ತಾನವರೆಗೆ ವ್ಯಾಪಿಸಿದವು ಎಂದು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಕಾಲಘಟ್ಟದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಬೌದ್ಧ ಧರ್ಮಕ್ಕೆ ಹೊಸ ಚೈತನ್ಯ ದೊರೆಯಿತು. ದೀಕ್ಷಾಭೂಮಿಗೆ ಭೇಟಿ ನೀಡುವ ನಾಗರಿಕರಿಗೆ ಸರ್ಕಾರವು ಸೌಲಭ್ಯಗಳನ್ನು ಒದಗಿಸಿದೆ ಎಂದು ಹೇಳಿದರು.

ಬುದ್ಧರ ತತ್ವಗಳು ಸಮಾನತೆ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಹೇಗೆ ಸಹಾಯಕವಾಗಬಹುದು ಎಂಬುದರ ಕುರಿತು ಪ್ರತಿಯೊಬ್ಬರೂ ಚಿಂತನೆ ನಡೆಸಬೇಕು ಎಂದು ಸಲಹೆ ನೀಡಿದರು.

ಸಾಹಿತಿ ರವೀಂದ್ರನಾಥ ಹೊಸಮನಿ ಉಪನ್ಯಾಸ ನೀಡಿ, ಬುದ್ಧರ ಪಂಚಶೀಲ ತತ್ವ, ಅಷ್ಟಾಂಗ ಮಾರ್ಗ ಹಾಗೂ 22 ಪ್ರತಿಜ್ಞೆಗಳು ಜೀವನದ ಯಶಸ್ಸಿಗೆ ದಾರಿ ತೋರಿಸುತ್ತವೆ ಎಂದು ಹೇಳಿದರು. ಜಾತಿ, ಅಸಮಾನತೆ, ಲಿಂಗಭೇದ ಹಾಗೂ ಅಸ್ಪೃಶ್ಯತೆ ನಿವಾರಣೆಗೆ ಬುದ್ಧರು ಮಾರ್ಗದರ್ಶನ ನೀಡಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಮಾತನಾಡಿ, ಬುದ್ಧರು ಶಾಂತಿ, ಸತ್ಯ, ಅಹಿಂಸೆ, ಪ್ರೀತಿ ಮತ್ತು ಕರುಣೆಯ ಸಂದೇಶವನ್ನು ವಿಶ್ವಕ್ಕೆ ನೀಡಿದ್ದಾರೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಯಶಸ್ಸು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಬೌದ್ಧ ಧರ್ಮಗುರು ಬಂತೇಜಿ, ಬುದ್ಧ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಾಬುರಾವ್ ಬುತಾಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಲುಂಬಿನಿ ಉದ್ಯಾನವನದವರೆಗೆ ಭವ್ಯ ಮೆರವಣಿಗೆ ನಡೆಯಿತು.

# ...ಮೊದಲನೇ ಪುಟದಿಂದ

## ರಸಗೊಬ್ಬರ ಬಳಕೆ ನಿಯಂತ್ರಿಸಿ ಸಾವಯವ ಕೃಷಿಗೆ ಆದ್ಯತೆ ಅಗತ್ಯ: ನಯೀಮ್ ಹುಸೇನ್

ಉತ್ತಮ ಇಳುವರಿ ಪಡೆಯಲು ಸಹಕಾರಿ ಆಗುತ್ತದೆ. ಇದರಿಂದ ರೈತರು ಆರ್ಥಿಕವಾಗಿ ಸಬಲರಾಗಬಹುದು ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕಿ ದೀಪಾ ಕುಲ್ಕರ್ಣಿ ಮಾತನಾಡಿ, ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ನೂತನ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಸಮಗ್ರ ಕೃಷಿ ಪದ್ಧತಿಗಳನ್ನು ಅನುಸರಿಸುವ ಮೂಲಕ ಕಡಿಮೆ ವೆಚ್ಚದಲ್ಲಿ ಹೆಚ್ಚು ಆದಾಯ ಗಳಿಸಲು ಸಾಧ್ಯವೆಂದರು. ಕೃಷಿ ಅಧಿಕಾರಿ ಮಾನಸ ವೀಣಾ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ತಾಂತ್ರಿಕ ಸಹಾಯಕ ನರಸಿಂಹಲು, ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಎಫ್‌ಐಡಿ ಮೂಲಕ ಇ-ಕೆವೈಸಿ ಮಾಡಿಸಿಕೊಳ್ಳುವ ಅಗತ್ಯವನ್ನು ವಿವರಿಸಿದರು.ಕಾರ್ಯಕ್ರಮದಲ್ಲಿ ರೈತರು ಇಲಾಖೆಯ ಅಧಿಕಾರಿಗಳೊಂದಿಗೆ ಸಂವಾದ ನಡೆಸಿ ಕೃಷಿ ಸಂಬಂಧಿತ ಮಾಹಿತಿ ಪಡೆದುಕೊಂಡರು.

## ಅಳಿಯನ ಮನೆಗೆ ಕನ್ನ ಹಾಕಿದ ಅತ್ತೆ ಆರೋಪಿಗಳನ್ನು ಜೈಲಿಗಟ್ಟಿದ ಪೊಲೀಸರು

ಜೊತೆಗೂಡಿ ಉಜ್ವಲಾ ಕಳ್ಳತನ ಮಾಡಿದ್ದರು. ಅತ್ತೆಗೆ ಮನೆಯಲ್ಲಿರುವಂತೆ ಹೇಳಿ ಸ್ನೇಹಿತರ ಮದುವೆಗೆ ಅಂತ ಮಗಳು ಮತ್ತು ಅಳಿಯ ಹೋಗಿದ್ದರು. ಈ ವೇಳೆ, ಪುತ್ರಿಯ ಚಿನ್ನದ ಬಳೆ, ಉಂಗುರ, ನೆಕ್ಲೇಸ್ ಸೇರಿ 110 ಗ್ರಾಂ ಚಿನ್ನಾಭರಣಗಳನ್ನು ದೋಚಿದ್ದರು.ಮದುವೆ ಮುಗಿಸಿ ಮನೆಗೆ ಬಂದು ನೋಡಿದಾಗ ಚಿನ್ನಾಭರಣ ಕಳ್ಳತನ ಆಗಿರುವ ವಿಚಾರ ಅಳಿಯ್ ಮತ್ತು ಮಗಳಿಗೆ ಗೊತ್ತಾಗಿದೆ. ಚಿನ್ನಾಭರಣ ಕಳ್ಳತನ ಆದ ಬಗ್ಗೆ ಅತ್ತೆಯನ್ನ ಅಳಿಯ ವಿಚಾರಿಸಿದ್ದಾರೆ.

ಈ ವೇಳೆ, ತನಗೆ ಏನೂ ಗೊತ್ತಿಲ್ಲ ಎಂದು ಅತ್ತೆ ನಾಟಕ ಆಡಿದ್ದರು.ಆಗ ಟಿಳಕವಾಡಿ ಪೊಲೀಸ್ ಠಾಣೆಗೆ ಬಂದು, ಅಳಿಯ ದೂರು ದಾಖಲಿಸಿದ್ದರು. ಪ್ರಕರಣದ ತನಿಖೆಗೆ ಇಳಿದ ಪೊಲೀಸರ ಮುಂದೆ ಅತ್ತೆಯ ಅಸಲಿಯತ್ತು ಬಯಲಾಗಿದೆ. ತೀವ್ರ ವಿಚಾರಣೆ ನಡೆಸಿದಾಗ ತಾನೇ ಕಳ್ಳತನ ಮಾಡಿರುವುದಾಗಿ ಆರೋಪಿ ಅತ್ತೆ ಉಜ್ವಲಾ ಬಾಯಿ ಬಿಟ್ಟಿದ್ದಾಳೆ. ಕದ್ದ ಚಿನ್ನ ಅಡವಿಟ್ಟು ಲಕ್ಷಾಂತರ ರೂಪಾಯಿ ಸಾಲವನ್ನು ಆರೋಪಿಗಳು ಪಡೆದಿದ್ದರು. ಸದ್ಯ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ಜೈಲಿಗೆ ರವಾನಿಸಿದ್ದಾರೆ.

## ಸಮಯ ಬದಲಾವಣೆಗೆ ಸೂಚನೆ

ಕೆಲಸ ಮಾಡಲು ಬರುವ ಮಹಿಳಾ ಕಾರ್ಮಿಕರಿಗೆ ರಕ್ಷಣಾ ವ್ಯವಸ್ಥೆ, ಶಿಶುಪಾಲನಾ ಕೇಂದ್ರಗಳ ವ್ಯವಸ್ಥೆ ಮಾಡುವಂತೆ ಸೂಚಿಸಿದ್ದಾರೆ. ಗಾಯ ಸೇರಿದಂತೆ ಅಗತ್ಯ ಆರೋಗ್ಯ ಸೇವೆಗೆ ತುರ್ತಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲು ಅಂಬುಲೆನ್ಸ್ ಸೇರಿ ಇತರೆ ವ್ಯವಸ್ಥೆಗಳನ್ನು ಸಿದ್ಧತೆ ಮಾಡಿಕೊಳ್ಳುವಂತೆ ನಿರ್ದೇಶನನೀಡಿದ್ದಾರೆ.

12 ಗಂಟೆಯೊಳಗೆ ಕೆಲಸ: ಉದ್ಯೋಗ ಖಾತ್ರಿ ಯೋಜನೆಯಡಿ ಎರಡು ಹಾಜರಾತಿ ವ್ಯವಸ್ಥೆಯಿದ್ದು ಬೆಳಿಗ್ಗೆ 6 ಗಂಟೆಯಿಂದ 12 ಯೊಳಗೆ ಕಾಮಗಾರಿ ನಿರ್ವಹಿಸಲು ಗ್ರಾಮ ಪಂಚಾಯ್ತಿಗಳು ನಿಗಾವಹಿಸಬೇಕಿದೆ. ಉದ್ಯೋಗ ಖಾತ್ರೆ ಕಾಯ್ದೆ 2005 ಪ್ಯಾರಾ 23 ಅನ್ವಯ ಕೆಲಸ ಸ್ಥಳದಲ್ಲಿ ಅಗತ್ಯ ಸೌಲಭ್ಯ ಒದಗಿಸಲು ತಾಲೂಕ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡುವಂತೆ ಸೂಚಿಸಿದ್ದಾರೆ.

ಗ್ರಾಮ ಪಂಚಾಯ್ತಿಗಳಿಗೆ ಇನ್ನೂ ಅಧಿಕೃತವಾಗಿ ಸಮಯದ ಬದಲಾವಣೆ ಆದೇಶ ರವಾನೆಯಯಾಗಿಲ್ಲ. ಮೌಖಿಕ ಸೂಚನೆ ಮೇರೆಗೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಅನೇಕ ಕಡೆಗಳಲ್ಲಿಯೂ ಬಿಸಿಲಿನಲ್ಲೂ ಕೆಲಸ ನಿರ್ವಹಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

## ಬುರ್ದಿಪಾಡನಲ್ಲಿ ಕುರಿ ಶೆಟ್‌ಗೆ ಅಕಸ್ಮಿಕ ಬೆಂಕಿ ತಗುಲಿ 20 ಕುರಿ, 10 ಮೇಕೆಗಳ ಸಜೀವ ದಹನ

ಅಗ್ನಿ ಅವಘಡದ ಪರಿಣಾಮ ಶೆಡ್‌ನಲ್ಲಿದ್ದ 20 ಕೋಳಿಗಳು ಹಾಗೂ 10 ಮೇಕೆಗಳು ಸಜೀವ ದಹನವಾಗಿದ್ದು, ಜೊತೆಗೆ ಹತ್ತಿ ಮಾರಾಟದಿಂದ ಸಂಗ್ರಹಿಸಿದ್ದ ಸುಮಾರು 2 ಲಕ್ಷ ರೂಪಾಯಿ ನಗದು ಸಹ ಬೆಂಕಿಗೆ ಆಹುತಿಯಾಗಿದೆ.

ಒಟ್ಟಾರೆ ಸುಮಾರು 3 ಲಕ್ಷಕ್ಕೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಾಪಲದಿನ್ನಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

## ಕಲಬೆರಕೆ ಸೇಂದಿ ಮಾರಾಟ: ಮೂರು ಜನರ ಬಂಧನ

ಗ್ರಾಮದಲ್ಲಿ ನೀಲಮ್ಮ ಹಾಗೂ ವೆಂಕಟೇಶ (53) ಎಂಬವರು ತಮ್ಮ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸಿ.ಹೆಚ್. ಪೌಡರ್ ಮಿಶ್ರಿತ ಹೆಂಡವನ್ನು ಅನಧಿಕೃತವಾಗಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದರು. ದಾಳಿಯ ವೇಳೆ ಸುಮಾರು 67 ಲೀಟರ್ ಕಲಬೆರಕೆ ಹೆಂಡ (ಅಂದಾಜು ಮೌಲ್ಯ 1,340) ವಶಕ್ಕೆ ಪಡೆಯಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ.

ಈ ಸಂಬಂಧ ಯಾಪಲದಿನ್ನಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಇನ್ನೊಂದು ಘಟನೆಯಲ್ಲಿ, ಇಡಪನೂರು ಪೊಲೀಸ್ ಠಾಣಾ ವ್ಯಾಪ್ತಿಯ ಗಿಲ್ಲೆಸೂಗೂರು ಕ್ಯಾಂಪ್‌ನಲ್ಲಿ ರಾಜಕುಮಾರ (26) ಎಂಬಾತ ತನ್ನ ಮನೆಯ ಮುಂದೆ ಕಲಬೆರಕೆ ಸೇಂದಿ ಮಾರಾಟದ ಮೇಲೆ ದಾಳಿ ನಡೆಸಿದ ಪಿಎಸ್‌ಐ ನೇತೃತ್ವದಲ್ಲಿ ತಂಡ ಆರೋಪಿತನಿಂದ ಒಟ್ಟು 84 ಲೀಟರ್ ಕಲಬೆರಕೆ ಸೇಂದಿ ಅಂದಾಜು ಮೌಲ್ಯ 1,680 ಹಾಗೂ ಮದ್ಯ ವಿತರಣೆಗಾಗಿ ಬಳಸುತ್ತಿದ್ದ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ.

ಎರಡೂ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 275, 286 ಸೇರಿದಂತೆ ಕೆ.ಇ ಕಾಯ್ದೆಯ ಸಂಬಂಧಿತ ವಿಧಿಗಳಡಿ ಪ್ರಕರಣ ದಾಖಲಿಸಲಾಗಿದ್ದು, ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎರಡು ಪ್ರಕರಣಗಳನ್ನು ಬೇದಿಸಿದ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ಲಾಘಿಸಿದರು.

## ವಾರ್ಡ 18 ರಲ್ಲಿ ರಸ್ತೆ ಕಾಮಗಾರಿಗೆ ವಸಂತಕುಮಾರ ಚಾಲನೆ

ಯಾವದಾದರೂ ಕಾಮಗಾರಿಗಳಿಗೆ ಅನುದಾನ ಬೇಕಿದ್ದರೆ ಈ ವರ್ಷ ಅನುದಾನ ಒದಗಿಸಿ ಕೊಡುವುದಾಗಿ ಭರವಸೆ ನೀಡಿದರು. ಈ ಸಂಧರ್ಭದಲ್ಲಿ ಆರ್‌ಡಿಎ ಮಾಜಿ ಅಧ್ಯಕ್ಷ ಅಬ್ದುಲ್ ಕರೀಂ,18ನೆ ವಾರ್ಡನ ಮಹಾನಗರ ಪಾಲಿಕೆ ಸದಸ್ಯರಾದ ಲಲಿತಾ ಕಡಗೋಲ ಆಂಜನೇಯ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ದರೂರ್ ಬಸವರಾಜ್ ಪಾಟೀಲ್, ಆರ್ಯವೈಶ್ಯ ಮಹಾಸಭಾ ರಾಜ್ಯ ಉಪಾಧ್ಯಕ್ಷ ಕುಂಟನಾಳ ವೆಂಕಟೇಶ್, ಪೆಪ್ಸಿ ಗೋವಿಂದ, ಕೊಂಡ ಪ್ರಕಾಶ, ರಾಮಕೃಷ್ಣ ನಾಯಕ, ಎ ಅರುಣ ಕುಮಾರ್, ಕೆ. ಅಸ್ಲಾಂ ಪಾಶ, ಜೆ ಸತ್ಯನಾಥ ,ಜೆ.ಅಂಜಿನಕುಮಾರ್ ,ಸಿ.ನಾಗರಾಜ, ವಿಜಯ್, ಮನೋಹರ್ ಇತರರು ಹಾಜರಿದ್ದರು.

## ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ತೀವ್ರಗೊಳಿಸಲು ಕರೆ

ಜಾಗತಿಕ ಆರ್ಥಿಕ ಅಸ್ಥಿರತೆ ಹಾಗೂ ಯುದ್ಧ ಪರಿಸ್ಥಿತಿಗಳ ಪರಿಣಾಮವಾಗಿ ಇಂಧನ ಬಿಕ್ಕಟ್ಟು ಉಂಟಾಗಿ ಕೈಗಾರಿಕಾ ವಲಯದ ಮೇಲೆ ಗಂಭೀರ ಪರಿಣಾಮ ಬೀರಿದೆ. ಹಲವು ಕೈಗಾರಿಕೆಗಳು ಉತ್ಪಾದನೆ ಕಡಿಮೆ ಮಾಡುತ್ತಿದ್ದು, ಸಾವಿರಾರು ವಲಸೆ ಕಾರ್ಮಿಕರು ಉದ್ಯೋಗ ಕಳೆದುಕೊಂಡು ತಮ್ಮ ಮೂಲ ಊರುಗಳಿಗೆ ಮರಳುವಂತಾಗಿದೆ ಎಂದು ಅಭಿಪ್ರಾಯಪಟ್ಟರು.

ದೇಶದ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ವೇತನ ಹೆಚ್ಚಳ ಹಾಗೂ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದು, ಅವರ ಮೇಲೆ ದಮನಾತ್ಮಕ ಕ್ರಮ ಕೈಗೊಳ್ಳುತ್ತಿರುವುದನ್ನು ಖಂಡಿಸಿದರು. ಎಂಟು ಗಂಟೆಗಳ ಕೆಲಸದ ಹಕ್ಕು ಸೇರಿದಂತೆ ಕಾರ್ಮಿಕರಿಗೆ ದೊರೆತಿರುವ ಹಕ್ಕುಗಳು ದೀರ್ಘಕಾಲದ ಹೋರಾಟ ಮತ್ತು ಸಂಘಟಿತ ಚಳುವಳಿಗಳ ಫಲವಾಗಿವೆ.

ಚಿಕಾಗೋ ಹೇಮಾರ್ಕೆಟ್ ಹೋರಾಟದಿಂದ ಆರಂಭವಾದ ಈ ಚಳುವಳಿ ಭಾರತದಲ್ಲೂ ಕಾರ್ಮಿಕ ಕಾನೂನುಗಳ ರೂಪುಗೊಳ್ಳುವಿಕೆಗೆ ಕಾರಣವಾಗಿದೆ. ಆದರೆ ಇತ್ತೀಚಿನ ನೀತಿಗಳು ಈ ಐತಿಹಾಸಿಕ ಸಾಧನೆಗಳನ್ನು ಹಿಂತೆಗೆದುಕೊಳ್ಳುವ ಪ್ರಯತ್ನವಾಗಿವೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಹಾಗೂ ಯುವಜನರು ಒಗ್ಗಟ್ಟಾಗಿ ಶೋಷಣೆ ಮತ್ತು ದಮನದ ವಿರುದ್ಧ ಹೋರಾಟ ಬಲಪಡಿಸಬೇಕೆಂದು ಕರೆ ನೀಡಿದರು. ಎಂಟು ಗಂಟೆಗಳ ಕೆಲಸದ ಹಕ್ಕು ಖಚಿತಪಡಿಸಬೇಕು, ಗುತ್ತಿಗೆ ಪದ್ಧತಿಯ ದುರ್ಬಳಕೆ ನಿಲ್ಲಿಸಬೇಕು,ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಕಾರ್ಮಿಕ ಸಂಘಟನೆಗಳ ಹಕ್ಕುಗಳನ್ನು ರಕ್ಷಿಸಬೇಕು,ಕಾರ್ಮಿಕರ ಮೇಲಿನ ದಮನಾತ್ಮಕ ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು, ಬಾಕಿ ವೇತನ ಮತ್ತು ಸೌಲಭ್ಯಗಳನ್ನು ತಕ್ಷಣ ಪಾವತಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿಲಾನಿ ಯರಿಗೇರಾ, ಭೀಮಣ್ಣ, ಜಗದೀಶ್, ಹನೀಫ್ ಅಬಕಾರಿ, ನಿಸಾರ್ ಅಹ್ಮದ್, ಎಲ್ಲಪ್ಪ, ಮಾರಣ್ಣ, ನರಸಪ್ಪ, ಮೂವೀಸ್ ಹಾಗೂ ಜಗನ್ನಾಥ್ ನಾಯಕ್ ಉಪಸ್ಥಿತರಿದ್ದರು.

## ಹೊಸ ಆಶ್ರಯ ಕಾಲೋನಿಯಲ್ಲಿ ಚರಂಡಿ, ವಿದ್ಯುತ್ ದೀಪ ಅಳವಡಿಕೆಗೆ ಒತ್ತಾಯ

ನಿರ್ಮಾಣ ಮತ್ತು ರಸ್ತೆ ಡಾಂಬರೀ ಕರಣ ಕಾರ್ಯಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದರು.

ಇದಲ್ಲದೆ, ಹೊಸ ಆಶ್ರಯ ಕಾಲೋನಿಯಲ್ಲಿರುವ ಮೌಲಾನಾ ಆಜಾದ್ ಶಾಲೆಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು, ಮಳೆಗಾಲದಲ್ಲಿ ಅದರ ನೀರು ಶಾಲೆಯೊಳಗೆ ನುಗ್ಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಸಮಸ್ಯೆಯನ್ನು ತಡೆಗಟ್ಟಲು ದೊಡ್ಡ ಪ್ರಮಾಣದ ಕಾಲುವೆ ನಿರ್ಮಾಣ ಮಾಡಬೇಕೆಂದು ಕೂಡ ಮನವಿ ಮಾಡಿದ್ದಾರೆ.

ಸಮಸ್ಯೆಗಳನ್ನು ಶೀಘ್ರದಲ್ಲಿ ಪರಿಹರಿಸದಿದ್ದರೆ, ಎಲ್ಲರೂ ಸೇರಿಕೊಂಡು ಮಹಾನಗರ ಪಾಲಿಕೆ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಎಂ.ಡಿ. ಶೇಖ್, ಉಸ್ಮಾನ್, ಮಹಮ್ಮದ್ ಶಾಲಂ, ಮಹಮ್ಮದ್ ಖಾಜಾ, ಮುಬೀನ್ ಅಹ್ಮದ್, ಮಖ್ದೂಮ್, ಜಾವೀದ್, ಮುಜಾಮಿಲ್, ಅಫ್ತಾಬ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಎಲ್ಲಿ ಕೂಡ ಕಾಣಿಸುತ್ತಿಲ್ಲ: ಪ್ರಲ್ಹಾದ್ ಜೋಶಿ

**ದಾವಣಗೆರೆ,ಮೇ.2**-ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಎಲ್ಲಿ ಕೂಡ ಕಾಣಿಸುತ್ತಿಲ್ಲ, ರಾಹುಲ್ ಗಾಂಧಿ ಅವರ ಪಕ್ಷದ ಸ್ಥಿತಿ ಜನರಿಗೆ ಗೊತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಾಗ್ದಾಳಿ ನಡೆಸಿದರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದೇಶದ ಐದು ರಾಜ್ಯಗಳಲ್ಲಿ ಚುನಾವಣೆಯಾಗಿದೆ. ಮೇ ನಾಲ್ಕರಂದು ಫಲಿತಾಂಶ ಪ್ರಕಟವಾಗಲಿದೆ. ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಹುದೊಡ್ಡ ಸಾಧನೆಯನ್ನು ಈ ಚುನಾವಣೆಯಲ್ಲಿ ಮಾಡುತ್ತೇವೆ. ದೇಶದ ಎಲ್ಲಾ ಕಡೆ ಶಾಂತಿಯುತವಾಗಿ ಚುನಾವಣೆ ನಡೆದಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಸೋಲಿನ ಭಯದಲ್ಲಿ ಮಮತಾ ಬ್ಯಾನರ್ಜಿ ಇದ್ದಾರೆ. ಈ ಸೋಲಿನ ಭಯದಿಂದ ಸ್ಟ್ರಾಂಗ್ ರೂಂಗೆ ನುಗ್ಗೋದು, ಅಧಿಕಾರಿಗಳಿಗೆ ಬಾಯಿಗೆ ಬಂದಂತೆ ಬೈಯುವ ಕೆಲಸ ಮಾಡುತ್ತಿದ್ದಾರೆ. ಅವರ ಈ ರೀತಿಯ ವರ್ತನೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ ಎನ್ನುವುದು ತಿಳಿಯುತ್ತೆ. ಸ್ಥಳೀಯ ಚುನಾವಣೆಯಲ್ಲಿ ಜನರಿಗೆ ಯಾವ ರೀತಿ ಹಿಂಸೆ ಮಾಡಿದ್ದಾರೆ ಎನ್ನುವುದು ನಮಗೆ ಅರಿವಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಅದೇ ರೀತಿ




ಅಸ್ಸೋಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೆಲುವು ಸಾಧಿಸಲಿದ್ದೇವೆ. ಕೇರಳದಲ್ಲಿ ನಿರೀಕ್ಷೆಗೆ ಮೀರಿ ಸೀಟ್‌ಗಳು ಬರಲಿವೆ. ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಎಲ್ಲಿ ಕೂಡ ಕಾಣಿಸುತ್ತಿಲ್ಲ ಎಂದು ಹೇಳಿದರು.

ರಾಜ್ಯದಲ್ಲಿ ಉಪಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಗೆಲ್ಲಲಿದ್ದೇವೆ. ಹಣದ ಹೊಳೆ ಹರಿಸಿ, ಸರ್ಕಾರದ ಯಂತ್ರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಅದರೂ ಕೂಡ ನಾವು ಎರಡೂ ಕಡೆ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಮರ್ಷಿಯಲ್ ಎಲ್‌ಪಿಜಿ ಗ್ಯಾಸ್ ಬೆಲೆ ಏರಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಕಮರ್ಷಿಯಲ್ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಆದರೆ ಅದನ್ನು ಅಯಾ ಕಂಪನಿಗಳು ಮಾಡಿದ್ದಾರೆ. 2004-2005 ರಲ್ಲಿ ಕಾಂಗ್ರೆಸ್ ಇದ್ದಾಗ ಕಂಪನಿಗಳಿಗೆ ಬೆಲೆ ಏರಿಕೆ ಮಾಡುವ ಅವಕಾಶ ಮಾಡಿಕೊಟ್ಟಿದ್ದಾರೆ. ಜಾಗತಿಕ ಸ್ಥಿತಿಗತಿಗಳ ಬೆಳವಣಿಗೆ ಕೂಡ ಕಾರಣವಾಗುತ್ತದೆ. ಪಾಕಿಸ್ತಾನ ಸೇರಿದಂತೆ ಕೆಲ ದೇಶಗಳಲ್ಲಿ ಎಲ್‌ಪಿಜಿ, ಪೆಟ್ರೋಲಿಯಂ ಸಿಗುತ್ತಿಲ್ಲ. ಆದರೆ ಭಾರತದಲ್ಲಿ ನಿರಂತರವಾಗಿ ಸಿಗುತ್ತಿದೆ. ಹಾರ್ಮುಜ್ ಜಲಸಂಧಿಯಿಂದಲೇ ಬರಬೇಕಾದ ಹಿನ್ನೆಲೆ ಸ್ವಲ್ಪ ತೊಂದರೆಯಾಗಿದೆ. ಆಮದು ಮಾಡಿಕೊಳ್ಳುವುದೇ ಜಾಸ್ತಿ ಇರೋದ್ರಿಂದ ಬೆಲೆ ಏರಿಕೆಯಾಗಿದೆ. ಸಮಸ್ಯೆ ಬಗೆಹರಿದ ನಂತರ ದರ ಕಡಿಮೆ ಮಾಡುವ ಕೆಲಸ ಮಾಡಲಾಗುತ್ತದೆ ಎಂದು ಅವರು ಹೇಳಿದರು.

ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿ ಕಿತ್ತಾಟ ವಿಚಾರವಾಗಿ ಮಾತನಾಡಿ, ಸಿಎಂ ವಿಚಾರದಲ್ಲಿ ಮಲ್ಲಿಕಾರ್ಜುನ್ ಖರ್ಗೆಯವರನ್ನು ಎಳೆದುತಂದಿದ್ದಾರೆ. ಈ ಕುರ್ಚಿ ಕದನದಲ್ಲಿ ಖರ್ಗೆ ಹೆಸರು ತಂದು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಡಿಕೆಶಿಯವರನ್ನು ಸಿಎಂ ಮಾಡುವುದಾಗಿ ಹೈಕಮಾಂಡ್ ನಿರ್ಧಾರ ಮಾಡಿರುವುದಾಗಿ ಚರ್ಚೆ ಶುರುವಾಗಿದೆ. ಆದ್ದರಿಂದ ಖರ್ಗೆ ಹೆಸರು, ಪರಮೇಶ್ವರ್ ಹೆಸರು ತರುತ್ತಿದ್ದಾರೆ ಎಂದರು.

ಕುರ್ಚಿ ಕಿತ್ತಾಟದಲ್ಲೇ ಕಾಂಗ್ರೆಸ್ ಸರ್ಕಾರ ಇದೆ. ಇದರ ಒಟ್ಟು ಪರಿಣಾಮ ಭ್ರಷ್ಟಾಚಾರ, ಕಾನೂನು ಸುವ್ಯವಸ್ಥಿತ ಹಾಳಾಗಿದೆ. ಅವರ ಪಕ್ಷದ ವಿಚಾರ ಅದರ ಬಗ್ಗೆ ನಾವು ಮಾತಾಡೋದಿಲ್ಲ. ಹುಬ್ಬಳ್ಳಿಯಲ್ಲಿ ಡ್ರಗ್ಸ್ ಕೇಸ್‌ನಲ್ಲಿ ಯಾರದ್ದು ನೆಗೆಟಿವ್‌ಬಂದಿದೆ. ಅವರ ಹತ್ತಿರ ಹಣ ಪಡೆದಿದ್ದಾರೆ. ಪಾಸಿಟಿವ್ ಬಂದಿರುವವರ ಬಳಿ ಕೂಡ ಹಣ ವಸೂಲಿ ಮಾಡಿದ್ದಾರೆ. ಪಾಸಿಟಿವ್ ಬಂದವರನ್ನು ಸರಿದಾರಿಗೆ ತರಲು ಒಂದು ಕೇಸ್ ಹಾಕಿ ನೆಗೆಟಿವ್ ಬಂದವರನ್ನು ಬಿಡಬೇಕಿತ್ತು. ಅದನ್ನು ಮಾಡದೇ ತೊಂದರೆ ಕೊಟ್ಟಿದ್ದಾರೆ. ಶಾಸಕ ಬೆಲ್ಲದ್ ಅವರ ಆರೋಪ ಕೂಡ ಗಂಭೀರವಾದ ವಿಚಾರ ಎಂದು ಜೋಶಿ ಹೇಳಿದರು.

# ಕುಸಿಯುವ ಅಪಾಯದಲ್ಲಿರುವ ಶಿಥಿಲಗೊಂಡ ಕಟ್ಟಡಗಳನ್ನು ಕೆಡವಲು ಆದೇಶಿಸಿದ ಜಿಬಿಎ ಮುಖ್ಯ ಆಯುಕ್ತ

**ಬೆಂಗಳೂರು,ಮೇ.2**-ತನ್ನ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಾಂಪೌಂಡ್ ಗೋಡೆಗಳು ಮತ್ತು ಕಟ್ಟಡಗಳನ್ನು ತಕ್ಷಣವೇ ಗುರುತಿಸಿ ಕೆಡವುವಂತೆ ಜಿಬಿಎ ಮುಖ್ಯ ಆಯುಕ್ತ ಮ ಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬುಧವಾರ ಸಂಜೆ ನಗರದಲ್ಲಿ ಸುರಿದ ಭಾರಿ ಮಳೆ, ಬಲವಾದ ಗಾಳಿ ಮತ್ತು ಆಲಿಕಲ್ಲು ಮಳೆಯಿಂದ ಉಂಟಾದ ಹಾನಿ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿಕೆ ಶಿವಕುಮಾರ್ ಅವರ ನಿರ್ದೇಶನದ ಮೇರೆಗೆ ಈ ಸೂಚನೆಗಳನ್ನು ನೀಡಲಾಗಿದೆ.ಗುಡುಗು ಸಹಿತ ಮಳೆ ಮತ್ತು ಬಿರುಗಾಳಿಯು ನಗರದಲ್ಲಿ ತಾಪಮಾನವನ್ನು ಕಡಿಮೆ ಮಾಡಲು ಸಹಾಯ ಮಾಡಿತಾದರೂ, ಹಲವೆಡೆ ವ್ಯಾಪಕ ಹಾನಿಯುಂಟು ಮಾಡಿತು. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಕಾಂಪೌಂಡ್ ಗೋಡೆ ಕುಸಿದು ಒಂದು ಮಗು ಸೇರಿದಂತೆ ಏಳು ಜನರು ಸಾವಿಗೀಡಾಗಿದ್ದಾರೆ.

ಮಳೆಯ ತೀವ್ರತೆಯಿಂದಾಗಿ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು ಏಳು ಮಂದಿ ಸಾವಿಗೀಡಾಗಿದ್ದು, ಇದು ಅತ್ಯಂತ ದುರದೃಷ್ಟಕರ ಘಟನೆಯಾಗಿದೆ. ಮಳೆಯಿಂದಾಗಿ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ ಮತ್ತು ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಎಆಅ) ಪ್ರಕಟಣೆಯಲ್ಲಿ ತಿಳಿಸಿದೆ.

ಅಪಾಯಕಾರಿ ಮರಗಳು, ದುರ್ಬಲ ಕೊಂಬೆಗಳು, ಅಪಾಯಕಾರಿ ಗೋಡೆಗಳು ಮತ್ತು ಅಸುರಕ್ಷಿತ ಕಟ್ಟಡಗಳನ್ನು ತಕ್ಷಣ ಗುರುತಿಸಲು ಮತ್ತು ಯಾವುದೇ ಅಹಿತಕರ ಘಟನೆಗಳು ಮತ್ತು ಸಾರ್ವಜನಿಕರಿಗೆ ಅನಾನುಕೂಲತೆಯನ್ನು ತಪ್ಪಿಸಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಉಪ ಮುಖ್ಯಮಂತ್ರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆಟಿ ಎಂದು ಅದು ಹೇಳಿದೆ.

ಅದರಂತೆ, ಐದು ನಗರ ಪಾಲಿಗೆಗಳ ಆಯುಕ್ತರು ಮತ್ತು ಹೆಚ್ಚುವರಿ ಆಯುಕ್ತರು ಪರಿಸ್ಥಿತಿಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಮತ್ತು ನಗರ ನಿಗಮದ ಅಧಿಕಾರಿಗಳು ಮತ್ತು ನೌಕರರನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಲು ಸೂಚಿಸಲಾಗಿದೆ.ಮತ್ತಷ್ಟು ಮಳೆಯಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಉಂಟಾಗದಂತೆ ನೋಡಿಕೊಳ್ಳಲು ಅಗತ್ಯವಿರುವ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೆ ತರಲು ಈ ತಂಡಗಳಿಗೆ ನಿರ್ದೇಶನ ನೀಡಲಾಗಿದೆ.

### ಬಾಲೆನಹಳ್ಳಿಯಲ್ಲಿ ಭಕ್ತಿ ಸಂಭ್ರಮ: ಆಂಜನೇಯ ಸ್ವಾಮಿ ಪ್ರಾಣ ಪ್ರತಿಷ್ಠಾಪನೆ

# ಮನಶಾಂತಿಗೆ ಪರಮಾತ್ಮನ ಮೊರೆ ಅಗತ್ಯ: ಪ್ರಸನ್ನನಂದ ಸ್ವಾಮೀಜಿ

■ ಕನ್ನಡ ಮಾತೃ ಭೂಮಿ ವಾರ್ತೆ

**ಹರಪನಹಳ್ಳಿ,**ನಮ್ಮ ಬಳಿ ಎಷ್ಟೇ ಹಣ ಆಸ್ತಿ ಇದ್ದರೂ ಮನಶಾಂತಿ, ನೆಮ್ಮದಿಗಾಗಿ ಪರಮಾತ್ಮನ ಮೊರೆ ಹೋಗುವುದು ಪ್ರತಿಯೊಬ್ಬರಿಗೂ ಅನಿವಾರ್ಯ ಎಂದು ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ಡಾ.ಪ್ರಸನ್ನನಂದ ಸ್ವಾಮಿಗಳು ಹೇಳಿದರು.

ತಾಲೂಕಿನ ಬಾಲೆನಹಳ್ಳಿ ಗ್ರಾಮದಲ್ಲಿಆಂಜನೇಯ ಸ್ವಾಮಿ ವಿಗ್ರಹ ಪ್ರಾಣ ಪ್ರತಿಷ್ಠಾಪನೆ, ಗೋಪುರಕ್ಕೆ ಕಳಸಾರೋಹಣ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದ್ವೇಷ, ಅಸೂಯೆ ಬಿಟ್ಟು ಪ್ರೀತಿ, ಸೌಹಾರ್ದ, ಸಮೃದ್ಧವಾಗಿ ಜೀವನ ಸಾಗಿಸಬೇಕಾದರೆ ಭಯ ಭಕ್ತಿ ಅತ್ಯಗತ್ಯವಾಗಿದೆ. ಇದೇ ಕಾರಣಕ್ಕೆ ಪೂರ್ವಜರು ದೇವಾಲಯಗಳಿಗೆ ಹೆಚ್ಚಿನ ಮಹತ್ವ ನೀಡಿದ್ದರು. ಭಕ್ತಿ, ಶಕ್ತಿ, ಶಿಸ್ತು, ಸಕಾರಾತ್ಮಕತೆಯ ಪ್ರತಿರೂಪವೇ ಶ್ರೀ ಆಂಜನೇಯ ಸ್ವಾಮಿ ಆಗಿದ್ದಾರೆ ಎಂದರು.

ಅರಸೀಕೆರೆ ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಟಿದೇವಸ್ಥಾನಗಳು ಮಾನಸಿಕ ನೆಮ್ಮದಿ ಪ್ರಾಪ್ತಿ ನೀಡುವ ಕೇಂದ್ರವಾಗಿವೆ.ಕಟ್ಟಡಗಳು ಶಾಶ್ವತ ರೀತಿಯಲ್ಲಿ ಆಗಬೇಕು. ದೇವಸ್ಥಾನ ಜೊತೆಗೆ ಶಾಲಾ ಕಟ್ಟಡಗಳು



ನಿರ್ಮಾಣವಾಗಬೇಕು ಎಂದರು.

ನೀಲಗುಂದ ವೀರಕ್ತಮಠದ ಚನ್ನಬಸವ ಶಿವಯೋಗಿ ಸ್ವಾಮೀಜಿ ಮಾತನಾಡಿ, ಗುರು ಹಿರಿಯರ ಪ್ರೀತಿಗೆ ಪಾತ್ರರಾದರೆ ಮೋಕ್ಷ ಪ್ರಾಪ್ತಿಯೇ ಹೊರತು, ಲಗ್ನ, ಮಕ್ಕಳಾಗದಿರುವುದಲ್ಲ.

ದೇವರು ಮನುಷ್ಯನ ಸೃಷ್ಟಿಸಿದರೆ, ಮನುಷ್ಯ ಹಣಮೊಬೈಲ್ ಸೃಷ್ಟಿಸಿಕೊಂಡು ಸಂಸ್ಕಾರ ಮರೆಯುವಂತಾಗಿದೆ. ದೇವಸ್ಥಾನಗಳು ಮನುಷ್ಯನಬದಲಾವಣೆಗೆ ಸ್ಥಾಪಿತವಾಗಿದೆ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಟಿ ಭಾರತ ಬಹು ಧರ್ಮಿಯರ ದೇಶವಾಗಿದ್ದು, ಇಲ್ಲಿನ ದೇವಸ್ಥಾನಗಳು ಕೇವಲ ಪೂಜಾ ಸ್ಥಳಗಳಲ್ಲದೆ ನ್ಯಾಯ, ಸಂಸ್ಕೃತಿ ಮತ್ತು ಸಮಾಜ ಸೇವೆಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.ಅಧರ್ಮ ಹೆಚ್ಚಾಗಿ, ಧರ್ಮ ಅಳಿವಿನ ಅಂಚಿನಲ್ಲಿದ್ದಾಗ ದುಷ್ಕರನ್ನು ಶಿಕ್ಷೆಗೆ ಒಳಪಡಿಸಿ ಧರ್ಮ ಸ್ಥಾಪನೆಗೆ ದೇವರು ಜನ್ಮ ತಾಳುತ್ತಾನೆ. ಹಾಗಾಗಿ ನಾವು ಧರ್ಮ ರಕ್ಷಣೆಯ ತೊಡಬೇಕು ಎಂದರು.

ಶ್ರೀ ಆಂಜನೇಯ ಮೂರ್ತಿ ಪ್ರಾಣಪ್ರತಿಷ್ಠಾಪನೆ ಅಂಗವಾಗಿ ಅಪಾರ ಸಂಖ್ಯೆಯ ಭಕ್ತರ ಪಾಲ್ಗೊಂಡಿದ್ದರು. ಸಾಂಪ್ರದಾಯಿಕವಾಗಿ 108 ಪೂರ್ಣ ಕುಂಭಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಸಾಗಿದರು. ವಿವಿಧ ವಾದ್ಯ, ಕಲಾ ತಂಡಗಳು ಉತ್ಸವಕ್ಕೆ ಮೆರಗು ನೀಡಿತ್ತು. ಈ ಸಂದರ್ಭದಲ್ಲಿ ಯರಬಳ್ಳಿ ಉಮಾಪತಿ, ಎಚ್ ಕೆ ಹಾಲೇಶ್, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮನೋಹರ, ಉಚ್ಚಂಗೆಪ್ಪ, ಡಿ.ಸಿದ್ದಪ್ಪ, ಕವಲಹಳ್ಳಿ ಜಗದೀಶ್, ಮಂಜುನಾಥ್, ರಾಮನ ಗೌಡ, ಕೆಂಚನಗೌಡ, ನಿ.ಶಿ ರೇವಣಸಿದ್ದಪ್ಪ, ಚಿದಾನಂದಪ್ಪ ಸೇರಿದಂತೆ ಇತರರು ಇದ್ದರು.

# ಪರಿಸರ ಉಳಿವಿಗೆ ಪಕ್ಷಿ ಸಂಕುಲ ಸಂರಕ್ಷಣೆ ಅಗತ್ಯ: ಕೋಡಿಹಳ್ಳಿ ಭೀಮಪ್ಪ

**ಹರಪನಹಳ್ಳಿ,** ಜೆಸಿಐ ಸಂಸ್ಥೆಯಿಂದ ಮರಗಿಡಗಳಲ್ಲಿ ಮಡಿಕೆ ಕಟ್ಟಿ ಪಕ್ಷಿಗಳಿಗೆ ನೀರುಣಿಸುವ ಕಾಯಕ ಮಾದರಿಯಾಗಿದೆ , ಈ ಮೂಲಕ ಪಕ್ಷಿ ಸಂಕುಲ ಸಂರಕ್ಷಿಸಿದರೆ ಮಾತ್ರ ಪರಿಸರ ಉಳಿಯಲು, ಸಮೃದ್ದಗೊಳಿಸಲು ಸಾಧ್ಯವಾಗುತ್ತದೆ ಎಂದು ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ತಿಳಿಸಿದರು.

ನಗರದ ಸಮತಾ ಉದ್ಯಾನವನದಲ್ಲಿ ಶನಿವಾರ ಜ್ಯೂನಿಯರ್ ಚೇಂಬರ್ ಇಂಟರನ್ಯಾಷನಲ್ ಅಲು ಮ್ನಿ ಕ್ಲಬ್ (ಜೆಎಸಿ) ಆಯೋಜಿಸಿದ್ದ ಪಕ್ಷಿಗಳಿಗೆ ನೀರು ಕಲ್ಪಿಸುವ ಮಡಿಕೆ ಅಳವಡಿಸುವ



ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೆಸಿಐ ಸಂಸ್ಥೆಯಿಂದ ಮರಗಿಡಗಳಲ್ಲಿ ಮಡಿಕೆ ಕಟ್ಟಿ ಪಕ್ಷಿಗಳಿಗೆ ನೀರುಣಿಸುವ ಕಾಯಕ ಮಾದರಿಯಾಗಿದೆ. ಬೇಸಿಗೆ ಮುಗಿಯುವ ತನಕ ಮಡಿಕೆಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಕಾಳಜಿವಹಿಸಲು ಸಲಹೆ ನೀಡಿದರು.

ಜೆಎಸಿ ತಾಲ್ಲೂಕು ಅಧ್ಯಕ್ಷ ಎಚ್. ಮಲ್ಲಿಕಾರ್ಜುನ ಮಾತನಾಡಿ, ಜೆಸಿಐ, ಜೆಎಸಿ ಸಂಸ್ಥೆಯು ಒಂದು ಪಾತ್ರೆ ನೀರು ನೂರಾರು ಪಕ್ಷಿಗಳಿಗೆ ನೆರವು ಘೋಷಣೆಯೊಂದಿಗೆ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರುಣಿಸುವ ಚಿಕ್ಕ ಪ್ರಯತ್ನ ಮಾಡುತ್ತಿದೆ. 10 ದಿನ ನಡೆಯುವ ಈ ಅಭಿಯಾನದಲ್ಲಿ ತಾಲ್ಲೂಕಿನ ಜನತೆ ಸ್ವಯಂ ಪ್ರೇರಿತರಾಗಿ ಪಾಲ್ಗೊಂಡು ತಮ್ಮ ಮನೆಯ ಸುತ್ತಮುತ್ತ, ಛಾವಣಿಯಲ್ಲಿ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಬಹುದು.

ಇದನ್ನು ಮಾಡುವ ಅತ್ಯುತ್ತಮ ಪಕ್ಷಿ ಪ್ರೇಮಿಗಳಿಗೆ ಬಹುಮಾನ ಕೊಡಲಾಗುವುದು ಎಂದರು. ಬಿ.ಎಸ್.ರವಿಶಂಕರ, ವಲಯ ಮಂಡಳಿ ಸಂಸತ್ ಸದಸ್ಯ ವಿಶ್ವನಾಥ, ಪ್ರಸನ್ನಕುಮಾರ ಜೈನ್, ರವೀಂದ್ರ ಅಧಿಕಾರ, ಇರ್ಷಾದ್ ಭಾಷ, ಪ್ರಭಾಕರ ಕನ್ನಿಹಳ್ಳಿ, ಶಿವಕುಮಾರ, ಹುಲಿರಾಜ್ ಇತರ ರಿದ್ದರು.

## ವಾಣಿಜ್ಯ ಗ್ಯಾಸ್ ದರ ಏರಿಕೆ ಖಂಡನೆ ರಜಾಕ್ ಉಸ್ತಾದ್ ಆರೋಪ

ಕಂಡುಬರುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಇಂತಹ ಸಂಕಷ್ಟದ ಸಮಯದಲ್ಲೇ ದರ ಏರಿಕೆ ಮಾಡಿರುವುದು ಗಾಯದ ಮೇಲೆ ಉಪ್ಪು ಎರಚಿದಂತಾಗಿದೆ ಎಂದು ಟೀಕಿಸಿದ್ದಾರೆ.

2026ರ ಫೆಬ್ರವರಿ ಮೊದಲ ವಾರದಲ್ಲಿ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ದರವನ್ನು 60 ಹೆಚ್ಚಿಸಲಾಗಿದ್ದು, ಕಳೆದ ನಾಲ್ಕು ತಿಂಗಳಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ದರ ಒಟ್ಟು 1352 ಏರಿಕೆಯಾಗಿದೆ. ಪ್ರಸ್ತುತ ಅದರ ಬೆಲೆ 3071.50ಕ್ಕೆ ಏರಿಕೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ದರ ಏರಿಕೆಯಿಂದ ಹೋಟೆಲ್, ರೆಸ್ಟೋರೆಂಟ್, ಹ್ಯಾಂಟೀನ್ ಹಾಗೂ ಕೆಟರಿಂಗ್ ಸೇವೆಗಳ ಮೇಲೆ ತೀವ್ರ ಪರಿಣಾಮ ಬೀರುವುದರಿಂದ ಆಹಾರ ಪದಾರ್ಥಗಳ ದರ ಹೆಚ್ಚಳ ಅನಿವಾರ್ಯವಾಗುತ್ತದೆ. ಇದರ ಹೊರೆ ಅಂತಿಮವಾಗಿ ಸಾಮಾನ್ಯ ಜನರ ಮೇಲೆಯೇ ಬೀಳಲಿದೆ ಎಂದು ಹೇಳಿದ್ದಾರೆ.

ಚುನಾವಣೆ ಮುಗಿಯುವವರೆಗೂ ಕಾಯ್ದು, ಮತದಾನವಾದ ಕೂಡಲೇ ದರ ಏರಿಕೆ ಮಾಡಿರುವುದು ಕೇಂದ್ರ ಸರ್ಕಾರಕ್ಕೆ ಜನರ ಬದುಕಿಗಿಂತ ಚುನಾವಣೆ ಮುಖ್ಯ ಎಂಬುದನ್ನು ತೋರಿಸುತ್ತದೆ ಎಂದು ಟೀಕಿಸಿದ ಅವರು, ಇದು ಜನವಿರೋಧಿ ನೀತಿಯ ಸ್ಪಷ್ಟ ಉದಾಹರಣೆಯಾಗಿದೆ ಎಂದರು.

ಇದೇ ವೇಳೆ ಪೆಟ್ರೋಲ್ ಹಾಗೂ ಡೀಸೆಲ್ ದರಗಳೂ ಏರಿಕೆಯಾಗುವ ಸಾಧ್ಯತೆ ಇದ್ದು, ಇದರಿಂದ ಮತ್ತಷ್ಟು ದುಬಾರಿ ಬದುಕು ಎದುರಾಗಲಿದೆ ಎಂದು ಅವರು ಎಚ್ಚರಿಸಿದ್ದಾರೆ. ಕೇಂದ್ರ ಸರ್ಕಾರ ಜಾಗತಿಕ ಪರಿಸ್ಥಿತಿಗಳನ್ನು ಸಮರ್ಥವಾಗಿ ನಿರ್ವಹಿಸಿ ನಾಗರಿಕರನ್ನು ರಕ್ಷಿಸುವ ಜವಾಬ್ದಾರಿ ಹೊಂದಿದೆ.

ಆದರೆ ಬೆಲೆ ಏರಿಕೆಯ ಹೊರೆ ಹೊರಿಸುವ ಮೂಲಕ ಜನಸಾಮಾನ್ಯರನ್ನು ಸಂಕಷ್ಟಕ್ಕೆ ತಳ್ಳುತ್ತಿದೆ ಎಂದು ಅವರು ದೂರಿದ್ದಾರೆ.

## ಅಂಗನವಾಡಿ ಕೇಂದ್ರಗಳ ರಜೆ ವಿಸ್ತರಣೆಗೆ ಆಗ್ರಹಿಸಿ ಅಂಗನವಾಡಿ ನೌಕರರಿಂದ ಪ್ರತಿಭಟನೆ

ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತೀವ್ರ ಬಿಸಿಲಿನ ನಡುವೆ ಕಾರ್ಯನಿರ್ವಹಿಸುವುದು ಕಷ್ಟಕರವಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ, ವಿಶೇಷವಾಗಿ ರಾಯಚೂರು ಜಿಲ್ಲೆಯಲ್ಲಿ, ಬೇಸಿಗೆಯಲ್ಲಿ ಉಷ್ಣಾಂಶವು 42ರಿಂದ 44 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುತ್ತಿದ್ದು, ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಹೊರಗಡೆ ಸಂಚಾರವೇ ಕಷ್ಟವಾಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭಗಳಲ್ಲಿ 3ರಿಂದ 5 ವರ್ಷದ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಿಗೆ ಕರೆತರುವುದು ಸಾಧ್ಯವಾಗದ ಸಂಗತಿಯಾಗಿದೆ.ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ದೂರದ ಗ್ರಾಮಗಳಿಂದ ಅಂಗನವಾಡಿ ಕೇಂದ್ರಗಳಿಗೆ ತೆರಳಬೇಕಾಗುವುದು, ನೌಕರರು ಹಾಗೂ ಫಲಾನುಭವಿಗಳು ಬಿಸಿಲಿನ ತಾಪದಿಂದ ತೊಂದರೆಗೊಳಗಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಮಕ್ಕಳ ಹಾಗೂ ಪಾಲಕರ ಹಿತದೃಷ್ಟಿಯಿಂದ ರಾಯಚೂರು ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಇನ್ನೂ 15 ದಿನಗಳ ಕಾಲ ರಜೆ ವಿಸ್ತರಿಸಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷೆ ಹೆಚ್ ಪದ್ಮಾ, ವರಲಕ್ಷ್ಮಿ, ನಿರ್ಮಲ, ರಾಗಮ್ಮ, ನರ್ಮದಾ, ಶಾಂತಮ್ಮ, ಮಲ್ಲಮ್ಮ, ಶಾಲಂ, ಪ್ರಸಂಗಿ, ಶರಣಮ್ಮ, ರಹೆಮತ್ತ, ಜಿ.ಲಕ್ಷ್ಮಿ, ಮಮತಾ, ನಾಗರತ್ನ, ಸಾವಿತ್ರಿ, ಶೈಲಜಾ ಸೇರಿದಂತೆ ಅನೇಕರು ಇದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L